RNI: KARKAN\2019\78042



ಸಂಪಾದಕರು : ಸಿ.ಎನ್.ಸಮಗಂಡಿ.

# ಸತ್ಯ ಮಿಥ್ಯ

ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

Satyamithi Kannada Daily Morning



ಚನ್ನು ಮೆನ್ಸ್‌ವೇರ್
ಕೋಳ್ಯಾಯವರ ಕ್ರಾಸ್.
ಚನ್ನು ಸ್ಟಿಚ್‌ವರ್ಲ್ಡ್
ಬಿ.ಎಸ್.ಎನ್.ಎಲ್. ಆಫೀಸ್ ಹತ್ತಿರ,
ಜೇಂಟ್ಸ್ ಸ್ಪೇಷಲಿಸ್ಟ್ ಟೇಲರ್
ಗಜೇಂದ್ರಗಡ-582114.
ಸೆಲ್ : 9986982482, 9686165708



ಬೀರಲಿಂಗೇಶ್ವರ ದೇವಸ್ಥಾನದಿಂದ ಮಠದವರೆಗೆ ಸಾಗಿದ ಮೆರವಣಿಗೆ 2

ಪಶ್ಚಿಮ ಪದವೀಧರ ಮತಕ್ಷೇತ್ರ ಚುನಾವಣೆ : ಕಟ್ಟುನಿಟ್ಟಿನ ಪಾಲನೆಗೆ ಸೂಚನೆ 3

ಕೊಪ್ಪಳ ಜಿಲ್ಲೆಯಲ್ಲಿ ಕೃಷಿ ಹೊಂಡಗಳ ನಿರ್ಮಾಣ, ರೈತರಿಗೆ ವರದಾನ 4



ಸಂಪುಟ(Volume): 1 ಸಂಚಿಕೆ (Issue): 75 ● ಪುಟ (Page): 4 ● ದರ: Rs. 4 ಶುಕ್ರವಾರ 25 ಸೆಪ್ಟೆಂಬರ್ 2026 ● 25 SEPTEMBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ


## ರಾಜ್ಯದಲ್ಲಿ ನೆಲೆಸಿದ್ದ 160 ಅಕ್ರಮ ಬಾಂಗ್ಲಾದೇಶಿ ಪ್ರಜೆಗಳ ಗಡೀಪಾರು

ಸತ್ಯಮಿಥ್ಯ ಸುದ್ದಿಮೂಲ ಬೆಂಗಳೂರು:
ರಾಜಧಾನಿ ಬೆಂಗಳೂರು ಹಾಗೂ ನೆರೆಯ ಜಿಲ್ಲೆಗಳಲ್ಲಿ ಸೂಕ್ತ ದಾಖಲೆಗಳಿಲ್ಲದೆ ಅಕ್ರಮವಾಗಿ ನೆಲೆಸಿದ್ದ 160 ಬಾಂಗ್ಲಾದೇಶಿ ಪ್ರಜೆಗಳನ್ನು ಕಾನೂನು ಪ್ರಕ್ರಿಯೆಗೊಳಪಡಿಸಿ ಅವರ ತಾಯ್ನಾಡಿಗೆ ವಾಪಸ್ ಕಳುಹಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ಬೆಂಗಳೂರು ನಗರ ಪೊಲೀಸ್ ಹಾಗೂ ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ (ಎಫ್ ಆರ್ ಆರ್ ಓ) ಜಂಟಿಯಾಗಿ ಈ ಕಾರ್ಯಾಚರಣೆ ನಡೆಸಿವೆ. ಭಾರತೀಯ ವಾಯುಪಡೆಯ ವಿಶೇಷ ವಿಮಾನದ ಮೂಲಕ ಇವರನ್ನು ರಾಷ್ಟ್ರೀಯ ಗಡಿಗೆ ಕ-ರೆದೊಯ್ದು, ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ಹಸ್ತಾಂತರಿಸಲಾಯಿತು. ಅಲ್ಲಿಂದ ಅವರನ್ನು ಬಾಂಗ್ಲಾದೇಶಕ್ಕೆ ಗಡೀಪಾರು ಮಾಡುವ ಪ್ರಕ್ರಿಯೆ ಪೂರ್ಣಗೊಂಡಿದೆ.

ಬೆಂಗಳೂರಿನ ಬೆಳ್ಳಂದೂರು, ಬೇಗೂರು, ವರ್ತೂರು, ಬಂಡೆಪಾಳ್ಯ, ಮಾರತಹಳ್ಳಿ ಸೇರಿದಂತೆ ಚಿಕ್ಕಮಗಳೂರು ಮತ್ತು ಗದಗ ಜಿಲ್ಲೆಗಳಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸಿ ಇವರನ್ನು ವಶಕ್ಕೆ ಪಡೆದಿದ್ದರು.

**ನಿರಂತರ ಪರಿಶೀಲನೆ ಹಾಗೂ ಬಂಧನ:** ನಗರದ ಪ್ರಮುಖ ಪ್ರದೇಶಗಳು, ತಾತ್ಕಾಲಿಕ ಶೆಡ್‌ಗಳು ಮತ್ತು ಶಿಬಿರಗಳಲ್ಲಿ ಬಾಂಗ್ಲಾದೇಶಿ ಪ್ರಜೆಗಳು ಅಕ್ರಮವಾಗಿ ತಂಗಿದ್ದಾರೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಪೊಲೀಸರು ವ್ಯಾಪಕ ಪರಿಶೀಲನಾ ಕಾರ್ಯಾಚರಣೆ ನಡೆಸಿದ್ದರು. ಪರಿಶೀಲನೆ ವೇಳೆ ಮಾನ್ಯ ದಾಖಲೆಗಳಿಲ್ಲದಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಇವರನ್ನು ಬಂಧನ ಕೇಂದ್ರಗಳಲ್ಲಿ ಇರಿಸಲಾಗಿತ್ತು. ಕಾನೂನು ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕ ಗಡೀಪಾರು ಮಾಡಲಾಗಿದೆ.

ಗಡೀಪಾರಾದ ವ್ಯಕ್ತಿಗಳು ಮತ್ತೆ ದೇಶದೊಳಗೆ ಅಕ್ರಮವಾಗಿ ಪ್ರವೇಶಿಸದಂತೆ ಕಟ್ಟುನಿಟ್ಟಿನ ನಿಗಾ ವಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಇತ್ತೀಚೆಗಷ್ಟೇ ಎಲೆಕ್ಟ್ರಾನಿಕ್ ಸಿಟಿ ವಿಭಾಗದ ಪೊಲೀಸರು 31 ಬಾಂಗ್ಲಾ ಪ್ರಜೆಗಳನ್ನು ಕೋಲ್ಕತ್ತಾ ಮಾರ್ಗವಾಗಿ ವಾಪಸ್ ಕಳುಹಿಸಿದ್ದರು.



# ಸಿಇಸಿ ವಿರುದ್ಧ ಕ್ರಿಮಿನಲ್ ಮೊಕದ್ದಮೆಗೆ ಪ್ರಿಯಾಂಕಾ ಗಾಂಧಿ ವಾದ್ರಾ ಆಗ್ರಹ

ಸತ್ಯಮಿಥ್ಯ ನ್ಯೂಸ್ ಡೆಸ್ಕ್ ತಿರುವನಂತಪುರಂ:
ಮತದಾರರ ಪಟ್ಟಿಯಲ್ಲಿ ಅಕ್ರಮ ಎಸಗಿರುವ ಹಾಗೂ ಮತದಾರರ ಹೆಸರುಗಳನ್ನು ಕೈಬಿಟ್ಟಿರುವ ಆರೋಪದ ಹಿನ್ನೆಲೆಯಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಆಗ್ರಹಿಸಿದ್ದಾರೆ.

**ಮತದಾರರ ಪಟ್ಟಿಯಲ್ಲಿ ಅಕ್ರಮ ಎಸಗಿರುವ ಹಾಗೂ ಮತದಾರರ ಹೆಸರು ಕೈಬಿಟ್ಟಿರುವ ಆರೋಪ**

ಎಸ್‌ಐಆರ್‌ಗೆ ಸಂಬಂಧಿಸಿದ ನಿರ್ಧಾರಗಳು ಮತ್ತು ಆದೇಶಗಳಿಗೆ ಇತರ ಇಬ್ಬರು ಚುನಾವಣಾ ಆಯುಕ್ತರಾದ ಸುಖ್ಬೀರ್ ಸಿಂಗ್ ಸಂಧು ಹಾಗೂ ವಿವೇಕ್ ಜೋಶಿ ಅವರು ಕಳೆದ 10 ತಿಂಗಳಲ್ಲಿ ಕನಿಷ್ಠ 14 ಬಾರಿ ಅಧಿಕೃತವಾಗಿ ಆಕ್ಷೇಪ ವ್ಯಕ್ತಪಡಿಸಿದ್ದರು ಎಂದು ಖಾಸಗಿ ಪತ್ರಿಕೆ ವರದಿ ಪ್ರಕಟಿಸಿದ ಮರುದಿನವೇ ಪ್ರಿಯಾಂಕಾ ಈ ಹೇಳಿಕೆ ನೀಡಿದ್ದಾರೆ.

ಮತದಾರರ ನೋಂದಣಿ ಮತ್ತು ಹೆಸರುಗಳನ್ನು ತೆಗೆದುಹಾಕುವುದು, ಫಾರ್ಮ್ 6ರಲ್ಲಿ ಮಾಡಲಾದ ಬದಲಾವಣೆಗಳು ಹಾಗೂ ಮತದಾರರ ಪಟ್ಟಿಯ ಡೇಟಾಬೇಸ್ ನಿರ್ವಹಣೆ ಸೇರಿದಂತೆ ಹಲವು ಪ್ರಮುಖ ನಿರ್ಧಾರಗಳನ್ನು ತಮ್ಮ ಗಮನಕ್ಕೆ ತರದೆ ಅಥವಾ ತಮ್ಮ ಅನುಮೋದನೆ ಪಡೆಯದೆ ಆಯೋಗದ ಹೆಸರಿನಲ್ಲಿ ತೆಗೆದುಕೊಳ್ಳಲಾಗಿದೆ ಎಂದು ಸಂಧು ಮತ್ತು ಜೋಶಿ ಆಕ್ಷೇಪಿಸಿದ್ದರು ಎಂದು ತನಿಖಾ ವರದಿಯಲ್ಲಿ ತಿಳಿಸಲಾಗಿತ್ತು.

ಕೇರಳದ ವಯನಾಡಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಿಯಾಂಕಾ ಗಾಂಧಿ, "ನಮ್ಮ ಚುನಾವಣೆಯ ಪ್ರಜಾಸತ್ತಾತ್ಮಕ ಪ್ರಕ್ರಿಯೆಯೊಂದಿಗೆ ಚೆಲ್ಲಾಟವಾಡುವ ಯಾರೇ ಆದರೂ ಅವರು ದೇಶದ ವಿರುದ್ಧ ದೇಶದ್ರೋಹ ಎಸಗಿದಂತೆ. ಇದು ನಮ್ಮ ಸ್ಪಷ್ಟ ನಿಲುವು. ಆ ಹುದ್ದೆಯಲ್ಲಿರುವ ಯಾರಿಗೂ ಈಗಿರುವ ರೀತಿಯ ಕಾನೂನು ರಕ್ಷಣೆ ಇರಬಾರದು ಎಂದು ನಾನು ಭಾವಿಸುತ್ತೇನೆ" ಎಂದು ಹೇಳಿದ್ದಾರೆ.





"ಮುಖ್ಯ ಚುನಾವಣಾ ಆಯುಕ್ತರಿಗೆ ಈ ರಕ್ಷಣೆ ಇದೆ. ಮತದಾರರ ಪಟ್ಟಿಯಲ್ಲಿ ಅಕ್ರಮ ಎಸಗುವುದು ಹಾಗೂ ಅಂದಾಜು 13 ಕೋಟಿ ಮತದಾರರ ಹೆಸರುಗಳನ್ನು ತೆಗೆದುಹಾಕುವುದು ಪ್ರಜಾಪ್ರಭುತ್ವ, ಸಂವಿಧಾನ ಮತ್ತು ದೇಶದ ವಿರುದ್ಧದ ಕ್ರಿಮಿನಲ್ ಕೃತ್ಯ" ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

"ಕ್ರಿಮಿನಲ್ ಕೃತ್ಯಗಳು ನಿರ್ದಿಷ್ಟ ಕಾನೂನಿನಡಿ ಬರುತ್ತವೆ ಮತ್ತು ಅಂತಹ ಕೃತ್ಯಗಳನ್ನು ಎಸಗುವ ಜನರನ್ನು ಸಾಮಾನ್ಯವಾಗಿ ವಿಚಾರಣೆಗೆ ಒಳಪಡಿಸಿ ಶಿಕ್ಷಿಸಲಾಗುತ್ತದೆ. ಹಾಗಿರುವಾಗ ಚುನಾವಣಾ ಆಯುಕ್ತರಿಗೆ ಯಾವುದೇ ರಕ್ಷಣೆ ಏಕೆ ಇರಬೇಕು? ಅವರ ಕಣ್ಣ ಮುಂದೆಯೇ ಅಕ್ರಮ ನಡೆಯುತ್ತಿರುವುದನ್ನು ಅವರು ಸಂಪೂರ್ಣವಾಗಿ ತಿಳಿದಿದ್ದರು. ಅವರ ಸಹೋದ್ಯೋಗಿಗಳೇ ಈ ವಿಷಯವನ್ನು ಅವರ ಗಮನಕ್ಕೆ ತಂದಿದ್ದರು. ಆದರೂ ಅವರು ಅದನ್ನು ನಿರ್ಲಕ್ಷಿಸಿ, ಉದ್ದೇಶಪೂರ್ವಕವಾಗಿ ಅನ್ಯಾಯದ ಚುನಾವಣೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಇತರ ಕ್ರಿಮಿನಲ್‌ನಂತೆ ಅವರ ಮೇಲೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಮತ್ತು ದೇಶದ್ರೋಹದ ವಿಚಾರಣೆ ನಡೆಸಬೇಕು" ಎಂದು ಅವರು ಒತ್ತಾಯಿಸಿದರು.

ಬುಧವಾರವೂ ಈ ವಿಷಯವನ್ನು ಪ್ರಸ್ತಾಪಿಸಿದ್ದ ಪ್ರಿಯಾಂಕಾ ಗಾಂಧಿ, ಇದು ಪ್ರಜಾಪ್ರಭುತ್ವಕ್ಕೆ ಅತ್ಯಂತ ಗಂಭೀರ ಸಮಸ್ಯೆ ಎಂದಿದ್ದರು. "ಚುನಾವಣೆಗಳೇ ನಡೆಯದಿದ್ದರೆ ಪ್ರಜಾಪ್ರಭುತ್ವ ಎಲ್ಲಿರುತ್ತದೆ? ಚುನಾವಣೆಗಳು ಅನ್ಯಾಯವಾಗಿ ಮತ್ತು ತಿರುಚಲ್ಪಟ್ಟರೆ, ಚುನಾವಣಾ ಆಯೋಗವೇ ಅದಕ್ಕೆ ನೆರವು ನೀಡಿದಂತಾಗುತ್ತದೆ. ಚುನಾವಣಾ ಆಯುಕ್ತರಿಗೆ ಇದು ತಿಳಿದಿದ್ದರೂ ಅದಕ್ಕೆ ಅವಕಾಶ ನೀಡಿದರೆ, ಅದು ಪ್ರಜಾಪ್ರಭುತ್ವದ ಮೇಲಿನ ತೀವ್ರ ಆಕ್ರಮಣ ಮತ್ತು ದೇಶದ್ರೋಹದ ಕೃತ್ಯ" ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದರು.

## ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಗೆ ಸಿಎಂ ಡಿಕೆಶಿ ಆಗ್ರಹ

ಸತ್ಯಮಿಥ್ಯ ಸುದ್ದಿಮೂಲ ಬೆಂಗಳೂರು:
ಮತದಾನದ ಮೂಲಭೂತ ಹಕ್ಕನ್ನು ಕಾಪಾಡುವ ನಿಟ್ಟಿನಲ್ಲಿ ದೇಶದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ತಕ್ಷಣವೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಹಾಗೂ ಪ್ರಸ್ತುತ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ರದ್ದುಗೊಳಿಸಿ, ಸಂಪೂರ್ಣ ಹೊಸ ಮತದಾರರ ಪಟ್ಟಿಯನ್ನು ಸಿದ್ಧಪಡಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒತ್ತಾಯಿಸಿದ್ದಾರೆ.

ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮತದಾನದ ಹಕ್ಕು ಪ್ರತಿಯೊಬ್ಬ ನಾಗರಿಕನ ಬದುಕುವ ಹಕ್ಕಿಗೆ ಸಮಾನವಾಗಿದೆ. ಈ ಹಕ್ಕಿನ ಪರವಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಬೆಂಗಳೂರಿನಿಂದಲೇ ದೇಶಾದ್ಯಂತ ಧ್ವನಿ ಎತ್ತಿದ್ದಾರೆ ಎಂದರು.

**ಕೇಂದ್ರದ ವಿರುದ್ಧ ವಾಗ್ದಾಳಿ:** ಕೇಂದ್ರ ಸರ್ಕಾರವು ಮತದಾರರ ಹಕ್ಕುಗಳನ್ನು ಕಸಿಯುವ ಮೂಲಕ ಮತಗಳ್ಳತನಕ್ಕೆ ಇಳಿದಿದೆ. ಸಾಮಾನ್ಯ ಜನರ ಮತದಾನದ ಹಕ್ಕನ್ನು ರಾಜಕೀಯ ದುರುದ್ದೇಶಕ್ಕೆ ಬಳಸಿಕೊಳ್ಳಲಾಗುತ್ತಿದೆ. ಪಶ್ಚಿಮ ಬಂಗಾಳ ಮತ್ತು ಬಿಹಾರ ಸೇರಿದಂತೆ ಹಲವು ರಾಜ್ಯಗಳಲ್ಲಿ ಇದೇ ರೀತಿಯ ಅಕ್ರಮಗಳ ಮೂಲಕ ಸರ್ಕಾರಗಳನ್ನು ಹತೋಟಿಗೆ ತೆಗೆದುಕೊಳ್ಳಲಾಗಿದ್ದು, ಇದೀಗ ಕರ್ನಾಟಕದಲ್ಲೂ ಅಂತಹದ್ದೇ ಪ್ರಯತ್ನ ನಡೆಯುತ್ತಿದೆ ಎಂದು ಸಿಎಂ ಆಪಾದಿಸಿದರು.

**1 ಕೋಟಿಗೂ ಹೆಚ್ಚು ಮತಗಳ ತೆಗೆದುಹಾಕುವಿಕೆ:** ಕರ್ನಾಟಕದಲ್ಲೂ ಸುಮಾರು 1 ಕೋಟಿಗೂ ಅಧಿಕ ಮತಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಸರ್ಕಾರದ ಭಾಗವಾಗಿ ಈ ಪ್ರಕ್ರಿಯೆಗೆ ಸಹಕಾರ ನೀಡಲಾಗಿದ್ದರೂ, ಪ್ರಸ್ತುತ ವ್ಯವಸ್ಥೆ ಪಾರದರ್ಶಕವಾಗಿಲ್ಲ. ಆದ್ದರಿಂದ ಎಸ್‌ಐಆರ್ ಪ್ರಕ್ರಿಯೆಗೆ ಹೆಚ್ಚಿನ ಕಾಲಾವಕಾಶ ನೀಡುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಲಾಗಿದೆ. ಅಂತಿಮ ಮತದಾರರ ಪಟ್ಟಿ ಪ್ರಕಟವಾದ ನಂತರ ಮುಂದಿನ ಹೋರಾಟದ ಬಗ್ಗೆ ತೀರ್ಮಾನಿಸಲಾಗುವುದು ಎಂದರು.

**ಚುನಾವಣಾ ಆಯುಕ್ತರ ರಾಜೀನಾಮೆಗೆ ಆಗ್ರಹ:** ಚುನಾವಣಾ ಆಯೋಗದ ಒಳಗಡೆಯೇ ಸದಸ್ಯರ ನಡುವೆ ಭಿನ್ನಾಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಮೂರನೇ ಎರಡರಷ್ಟು ಸದಸ್ಯರ ಬೆಂಬಲವಿಲ್ಲದೆ ಏಕಪಕ್ಷೀಯ ನಿರ್ಧಾರ ಕೈಗೊಳ್ಳುವುದು ಸರಿಯಲ್ಲ. ಆಯೋಗದ ಹೆಸರಿನಲ್ಲಿ ರಾಜ್ಯಗಳ ಅಧಿಕಾರಿಗಳಿಗೆ ಬೆದರಿಕೆ ಹಾಕುವುದು ಅಥವಾ ಒತ್ತಡ ಹೇರುವುದನ್ನು ಒಪ್ಪಲು ಸಾಧ್ಯವಿಲ್ಲ. ಹೀಗಾಗಿ ಮುಖ್ಯ ಚುನಾವಣಾ ಆಯುಕ್ತರು ನೈತಿಕ ಹೊಣೆ ಹೊತ್ತು ಸ್ವಯಂಪ್ರೇರಿತವಾಗಿ ರಾಜೀನಾಮೆ ನೀಡಬೇಕು ಎಂದು ಹೇಳಿದರು.



### ಬಲಹೀನ ವರ್ಗಗಳ ಧ್ವನಿ ಹತ್ತಿಕ್ಕುವ ಯತ್ನ

**ಮತದಾರರ ಪಟ್ಟಿ ಬದಲಾವಣೆಗೆ ಸಂಬಂಧಿಸಿದ ಫಾರ್ಮ್ 6, 7 ಮತ್ತು 8ರ ಪ್ರಕ್ರಿಯೆಗಳು ಅನಕ್ಷರಸ್ಥರು ಹಾಗೂ ದುರ್ಬಲ ವರ್ಗದ ಜನರ ಹಕ್ಕುಗಳನ್ನು ಕಸಿಯುವಂತಿವೆ. ಇದು ಕೇವಲ ಒಂದು ಪಕ್ಷದ ವಿಚಾರವಲ್ಲ, ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕಿನ ಪ್ರಶ್ನೆ. ಪ್ರಸ್ತುತ ಕರೆದಿರುವ ವಿಶೇಷ ಅಧಿವೇಶನವು ಬರ ಹಾಗೂ ಕಸ್ತೂರಿ ರಂಗನ್ ವರದಿಗೆ ಸೀಮಿತವಾಗಿದ್ದು, ಅಧಿವೇಶನದ ಬಳಿಕ ಈ ಗಂಭೀರ ವಿಚಾರದ ಬಗ್ಗೆ ವಿಸ್ತೃತವಾಗಿ ಪರಿಶೀಲಿಸಲಾಗುವುದು. ಸಂಸತ್ತಿನಲ್ಲೂ ಈ ಕುರಿತು ವ್ಯಾಪಕ ಚರ್ಚೆಯಾಗಬೇಕಿದ್ದು, ಮತದಾರರ ದತ್ತಾಂಶವನ್ನು ಸಂಪೂರ್ಣವಾಗಿ ಮರುಪರಿಶೀಲಿಸಬೇಕು ಎಂದು ತಿಳಿಸಿದರು.**

**ಸತ್ಯ ಸುದ್ದಿಗಳ ಮಾಹಿತಿ ಕಣಜ**
**ನಿತ್ಯ ಸತ್ಯ ಮಿಥ್ಯ ಪತ್ರಿಕೆ ಓದಿ**

## ಕೊಪ್ಪಳ ಗವಿಸಿದ್ದೇಶ್ವರ ಶ್ರೀಗಳಿಂದ ಈ ಬಾರಿಯ ಮೈಸೂರು ದಸರಾ ಉದ್ಘಾಟನೆ: ಸಿಎಂ ಡಿ ಕೆ ಶಿವಕುಮಾರ್ ಘೋಷಣೆ

**ಬೆಂಗಳೂರು**:"ಈ ಬಾರಿಯ ನಾಡ ಹಬ್ಬ ಮೈಸೂರು ದಸರಾವನ್ನು ಕೊಪ್ಪಳದ ಗವಿಮಠದ ಪರಮಪೂಜ್ಯ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀಜಿಗಳು ಉದ್ಘಾಟಿಸಲಿದ್ದಾರೆ" ಎಂದು ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ಘೋಷಿಸಿದರು.



ವಿಧಾನಸಭೆಯಲ್ಲಿ ಗುರುವಾರ ನಡೆದ ಬರಗಾಲದ ಚರ್ಚೆಗೆ ಉತ್ತರಿಸಿದ ಸಂದರ್ಭದಲ್ಲಿ ಶಿವಕುಮಾರ್ ಅವರು ಈ ವಿಚಾರ ತಿಳಿಸಿದರು. ಸದನದ ಎಲ್ಲಾ ಸದಸ್ಯರನ್ನು ದಸರಾ ಉತ್ಸವಕ್ಕೆ ಆಹ್ವಾನಿಸಿದರು.



"ಈ ಬಾರಿ ಕೊಪ್ಪಳದ ಪರಮಪೂಜ್ಯ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀಜಿಗಳಿಗೆ ಉದ್ಘಾಟನೆ ಮಾಡಬೇಕು ಎಂದು ಆಹ್ವಾನ ಪತ್ರ ಕಳುಹಿಸಿದ್ದೇನೆ. ಇಂದು ಬೆಳಗ್ಗೆ ಅವರ ಜತೆ ದೂರವಾಣಿ ಮೂಲಕವೂ ಮಾತನಾಡಿದ್ದೇನೆ. ಅವರು ನಮ್ಮ ಆಹ್ವಾನವನ್ನು ಒಪ್ಪಿಕೊಂಡಿದ್ದಾರೆ" ಎಂದು ತಿಳಿಸಿದರು.

"ಮುಂದಿನ ತಿಂಗಳು ನಾಡಹಬ್ಬ ದಸರಾ ಬರುತ್ತಿದೆ. ಈ ವರ್ಷದ ದಸರಾ ಉದ್ಘಾಟನಾ ಕಾರ್ಯಕ್ರಮಕ್ಕೆ ತಮ್ಮೆಲ್ಲರಿಗೂ ನಾನು ಆಹ್ವಾನ ನೀಡುತ್ತಿದ್ದೇನೆ. ಎಲ್ಲರೂ ಬರಬೇಕು" ಎಂದರು.

## ಹಾಲು, ಬಸ್ ಪ್ರಯಾಣ ದರ ಏರಿಕೆ ಚರ್ಚೆ

**ಬೆಂಗಳೂರು:** ಹಾಲಿನ ದರ ಹಾಗೂ ಬಸ್ ಪ್ರಯಾಣ ದರದ ಏರಿಕೆ ಬಗ್ಗೆ ವಿಧಾನಪರಿಷತ್ ನಲ್ಲಿ ಚರ್ಚೆ ನಡೆಯಿತು. ಬರ ಪರಿಸ್ಥಿತಿ ಕುರಿತಾಗಿ ನಡೆ-ಯುತ್ತಿದ್ದ ಚರ್ಚೆಯ ಸಂದರ್ಭದಲ್ಲಿ ಹಾಲಿನ ದರ ಏರಿಕೆ ವಿಚಾರವಾಗಿ ಪರಿಷತ್ ಸದಸ್ಯ ಎಸ್ ರವಿ ಪ್ರಸ್ತಾಪಿಸಿ ಮನವಿ ಮಾಡಿದರು. ಲೀಟರ್ ಗೆ 10ರಿಂದ 15ರೂ ಏರಿಕೆ ಮಾಡಿದರೆ ಇದರಿಂದ ರೈತರಿಗೆ ಅನುಕೂಲ ಆಗಲಿದೆ ಎಂದರು.

ಇದೇ ಸಂದರ್ಭದಲ್ಲಿ ನಟ ಡಾ. ರಾಜಕುಮಾರ್ ಮತ್ತು ಅವರ ಮಕ್ಕಳನ್ನು ನಾವು ನೆನಪಿಸಿಕೊಳ್ಳಬೇಕು ಎಂದ ರವಿ, ಅವರೆಲ್ಲರೂ ನಂದಿನಿ ಜೊತೆ ನಿಂತಿಕೊಂಡರು. ಐದು ರೂಪಾಯಿಯೂ ಸಂಭಾವಣೆಯನ್ನು ಪಡೆದುಕೊಳ್ಳದೆ ಪ್ರಚಾರ ಮಾಡಿದ್ರು. ಅವರಿಗೊಂದು ಸದನ ಚಪ್ಪಾಳೆ ಹೊಡಿಬೇಕು. ಮಾಧ್ಯಮದವರು ಅದೇ ರೀತಿ ನಿಂತ್ಕೊಬೇಕು ಎಂದು ಮನವಿ ಮಾಡಿದರು.

ಹೈನುಗಾರಿಕೆಯ ಸಮಸ್ಯೆಯ ಬಗ್ಗೆ ಕಾಂಗ್ರೆಸ್ ಸದಸ್ಯ ಎಸ್ ರವಿ ಪ್ರಸ್ತಾಪ ಮಾಡಿ, ಯಾವ ಯಾವ ರಾಜ್ಯದಲ್ಲಿ ಹಾಲಿನ ಬೆಲೆ ಎಷ್ಟಿದೆ? ನಮ್ಮ ರಾಜ್ಯದಲ್ಲಿ ಹಾಲಿನ ದರ ಎಷ್ಟು ಎಂಬುವುದನ್ನು ಉಲ್ಲೇಖಿಸಿ, ರೈತರಿಗೆ ಆಗ್ತಿರುವ ಹೆಚ್ಚಿನ ವೆಚ್ಚದ ಬಗ್ಗೆ ಸದನದ ಗಮನ ಸೆಳೆದರು.

**ಶರವಣ ಅವರೇ ನಿಮ್ಮ ಬ್ರದರ್ ಗೂ ಹೇಳಿ:** ಇದೇ ಸಂದರ್ಭದಲ್ಲಿ ಜೆಡಿಎಸ್ ಸದಸ್ಯ ಶರವಣ ಅವರನ್ನು ಉದ್ದೇಶಿಸಿ, “ಶರವಣ ಅವ್ರೇ ನಿಮ್ಮ ಬ್ರದರ್ ಗೂ ಹೇಳಿ. ಅವರನ್ನೊಂದು ಕನ್ವಿನ್ಸ್ ಮಾಡಿ. ನಮ್ಮ ಶಿವಕುಮಾರ್ ಸಿಎಂ ಆದಾಗಿನಿಂದ ತಡೆಯೋಕೆ ಆಗ್ತಿಲ್ಲ. ಕೈಯ್ಯನ್ನೆಲ್ಲ ಹಿಸುಕಿಕೊಳ್ತಿದಾರೆ. ಎಲ್ಲಾದರಲ್ಲೂ ವಿರೋಧ ಮಾತಾಡ್ತಿದ್ದಾರೆ. ಈ ವಿಚಾರವಾಗಿ ಅವರನ್ನು ಮ್ಯಾನೇಜ್ ಮಾಡಿ” ಎಂದು ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರನ್ನು ಪರೋಕ್ಷವಾಗಿ ಉಲ್ಲೇಖಿಸಿ ಮನವಿ ಮಾಡಿದರು. ಹಾಲಿನ ದರದ ವಿಚಾರವಾಗಿ ಯಾವುದೇ ರಾಜಕೀಯ ಇಲ್ಲ. ಬಿಗ್ ಬ್ರದರ್‌ಗೂ ಹೋಗಲಿ ಕ್ರೆಡಿಟ್ ಎಂದು ರವಿ ಇದೇ ಸಂದರ್ಭದಲ್ಲಿ ಕಾಲೆಳೆದರು.



ಸತ್ಯಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

SATYA MITHI
Kannada Daily Morning

## ವೇರ್‌ಹೌಸ್ ರಸೀದಿ ಕಳೆದಿದೆ

ಗದಗ ಸೆಂಟ್ರಲ್ ವೇರ್‌ಹೌಸ್ ಕಾರ್ಪೊರೇಶನ್‌ದಲ್ಲಿ ಕಡಲೆ ದಾಸ್ತಾನು ಮಾಡಿದ್ದ ಬಾಂಡ್ (ರಸೀದಿ) ನಂ: WHR /1408/2025-26/00210 ಹಾಗೂ ಇತರ ದಾಖಲಾತಿಗಳು ದಿನಾಂಕ:-19-02-2026 ರಂದು ನರೇಗಲ್ಲ ಬಸ್‌ನಿಲ್ದಾಣದಲ್ಲಿ ಕಳದಿವೆ.

ಈ ಕುರಿತು ನರೇಗಲ್ಲ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಲಾಗಿದ್ದು, ಅರ್ಜಿ ಸಂಖ್ಯೆ 2429265/2026. ಆಗಿದೆ. ಯಾರಿಗಾದರೂ ಈ ಬಾಂಡ್ (ರಸೀದಿ) ದೊರೆತರೆ, ದಯವಿಟ್ಟು ಕೆಳಗಿನ ವಿಳಾಸಕ್ಕೆ ತಲುಪಿಸಲು ಅಥವಾ ದೂರವಾಣಿ ಕರೆ ಮಾಡಲು ವಿನಂತಿಸಲಾಗಿದೆ.

**ಸಂಪರ್ಕ ವಿಳಾಸ ಹಾಗೂ ವಿವರ :**

ಹೆಸರು : ಶರಣಪ್ಪಗೌಡ.ವೀರುಪಾಕ್ಷಗೌಡ. ಲಕ್ಕನಗೌಡರ
ಸ್ಥಳ : ನರೇಗಲ್ಲ (ಜಿ. ಗದಗ)
ಮೊಬೈಲ್ : 8147558826

## ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಕೊಟ್ರೇಶ ಅರವಟಗಿಮಠಗೆ ಸನ್ಮಾನ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ:**
ಪಟ್ಟಣದ ಎಂಸಿಎಸ್ ಗೆಳೆಯರ ಬಳಗದ 4ನೇ ವರ್ಷದ ವಾರ್ಷಿಕೋತ್ಸವದ ನಿಮಿತ್ತ ಇತ್ತೀಚೆಗೆ ಗದಗ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಾದ ಕಣಗಿನಹಾಳದ ಮುರಾರ್ಜಿ ದೇಸಾಯಿ ವಸತಿ ಶಾಲೆಯ ವಿಜ್ಞಾನ ಶಿಕ್ಷಕ ಕೋಟ್ರೇಶ ಅರವಟಗಿಮಠ ಅವರನ್ನು ಗೆಳೆಯರ ಬಳಗದ ವತಿಯಿಂದ ಕೊಡಿಕೊಪ್ಪದ ಹಠಯೋಗಿ ವೀರಪ್ಪಜ್ಜನ ಮಠದಲ್ಲಿ ಗುರುವಾರ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಡಾ. ಕೃಷ್ಣ ಕಾಳೆ, ಅನ್ನದಾನೇಶ್ವರ ಮರಡಿಮಠ, ಆನಂದ ಕೋಟಗಿ, ವಿಜಯ ಕೊಕಣಿ, ಮಂಜುನಾಥ ಧರ್ಮಾಯತ, ಅಂದಪ್ಪ ಮಡಿವಾಳರ, ಬಸವರಾಜ ಹುಲಕೋಟಿ, ರಮೇಶ ಗೆದಗೇರಿ, ಹನಮಂತ ಚಳ್ಳಮರದ, ಮಂಜುನಾಥ ಜುಟ್ಲ, ನರೇಶ ಜೋಳದ ಸೇರಿದಂತೆ ಇತರರು ಉಪಸ್ಥಿತರಿದ್ದರು



## ಮನೋರೋಗ ತಜ್ಞ ಡಾ. ಆನಂದ ಪಾಂಡುರಂಗಿ ನಿಧನ: ಗಜೇಂದ್ರಗಡದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ಧಾರವಾಡದ ಪ್ರಖ್ಯಾತ ಮನೋರೋಗ ತಜ್ಞ ಹಾಗೂ ಶ್ರೀ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಆಡಳಿತ ಮಂಡಳಿಯ ಸದಸ್ಯರಾದ ಡಾ. ಆನಂದ ಪಾಂಡುರಂಗಿ ಅವರು ಗುರುವಾರ ಬೆಳಿಗ್ಗೆ ಹೃದಯಾಘಾತದಿಂದ ದೈವಾಧೀನರಾಗಿದ್ದಾರೆ.

ಅವರ ಅಗಲಿಕೆಯ ಹಿನ್ನೆಲೆಯಲ್ಲಿ ಗಜೇಂದ್ರಗಡದ ಶ್ರೀ ಜ.ತೋಂಟದಾರ್ಯ ವಿದ್ಯಾಪೀಠದ ಆಡಳಿತ ಮಂಡಳಿ, ಸಿಬಿಎಸ್‌ಇ ಶಾಲೆ ಮತ್ತು ಪಿಯು ಕಾಲೇಜಿನ ಪ್ರಾಚಾರ್ಯರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ಸಮೂಹದ ವತಿಯಿಂದ ಇಂದು ಮಹಾವಿದ್ಯಾಲಯದಲ್ಲಿ ಮೌನಾಚರಣೆ ಮಾಡಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಡಾ. ಆನಂದ ಪಾಂಡುರಂಗಿ ಅವರು ಮೂರು ದಶಕಗಳ ಕಾಲ ವೈದ್ಯಕೀಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಲಾಯಿತು. ಉತ್ತರ ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ನೂರಾರು ಉಚಿತ ಮಾನಸಿಕ ಆರೋಗ್ಯ ಶಿಬಿರಗಳನ್ನು ಆಯೋಜಿಸಿ, ಬಡ ಮತ್ತು ನಿರ್ಗತಿಕ ರೋಗಿಗಳಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡುವ ಮೂಲಕ ಅವರು ಜನಪ್ರಿಯ ವೈದ್ಯ ಎಂದೇ ಪ್ರಸಿದ್ಧರಾಗಿದ್ದರು. ವಿದ್ಯಾಪೀಠದ ಬೆಳವಣಿಗೆಯಲ್ಲಿ ಅವರ ಪಾತ್ರ ಹಾಗೂ ಮಾನಸಿಕ ಕಾಯಿಲೆಯ ಬಗ್ಗೆ ಮೂಢನಂಬಿಕೆ ತೊಲಗಿಸಿ, ಸಾಮಾಜಿಕ ಕಳಂಕ ಹೋಗಲಾಡಿಸಲು ಅವರು ನೀಡಿದ ನಿರಂತರ ಸೇವೆಯನ್ನು ಈ ವೇಳೆ ನೆನೆಯಲಾಯಿತು.

ಗಜೇಂದ್ರಗಡದ ಶಾಲಾ–ಕಾಲೇಜು ಆವರಣದಲ್ಲಿ ನಡೆದ ಈ ಶೋಕ ಸಭೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಮತ್ತುಜ ಸಿಬ್ಬಂದಿಗಳು ಎರಡು ನಿಮಿಷಗಳ ಕಾಲ ಮೌನ ಆಚರಿಸಿ, ಮೃತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸಿದರು.



## ರಾಷ್ಟ್ರೀಯ ಸೇವಾ ಯೋಜನೆಯ ಸಂಸ್ಥಾಪನಾ ದಿನಾಚರಣೆ, ವಿದ್ಯಾರ್ಥಿಗಳಿಂದ ಜಾಥಾ ಹಾಗೂ ಸ್ವಚ್ಛತಾ ಅಭಿಯಾನ

**ಸತ್ಯಮಿಥ್ಯ ಸುದ್ದಿಮೂಲ ಮುಗಳಖೋಡ:**
ಸಮೀಪದ ಹಾರೂಗೇರಿಯ ಶ್ರೀ ರಾಮ ಮನೋಹರ ಲೋಹಿಯಾಸಮಾಜಕಲ್ಯಾಣಮತ್ತುಶಿಕ್ಷಣಸಂಸ್ಥೆಯಶ್ರೀ ಸಿದ್ದೇಶ್ವರಕಲಾಮತ್ತುವಾಣಿಜ್ಯಪದವಿಮಹಾವಿದ್ಯಾಲಯ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರ ಸಂಯೋಜನೆಯಲ್ಲಿ ಐಕ್ಯೂಇಸಿ ಹಾಗೂ ರೆಡ್ ಕ್ರಾಸ್ ಘಟಕಗಳ ಸಹಯೋಗದೊಂದಿಗೆ ರಾಷ್ಟ್ರೀಯ ಸೇವಾ ಯೋಜನೆ ಸಂಸ್ಥಾಪನಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಪದವಿ ವಿದ್ಯಾರ್ಥಿಗಳಿಂದ ಜಾಗೃತಿ ಜಾತಾ ಆಯೋಜಿಸಿ, ಸಾರ್ವಜನಿಕರಲ್ಲಿ ಸ್ವಚ್ಛತೆ, ಆರೋಗ್ಯ, ಸಾಮಾಜಿಕ ಜವಾಬ್ದಾರಿ ಹಾಗೂ ಸೇವಾ ಮನೋಭಾವದ ಕುರಿತು ಅರಿವು ಮೂಡಿಸಲಾಯಿತು. ನಂತರ ಹಾರೂಗೇರಿ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ಆಸ್ಪತ್ರೆಯ ಆವರಣವನ್ನು ಸ್ವಚ್ಛಗೊಳಿಸುವ ಮೂಲಕ "ಸೇವೆಯೇ ಶ್ರೇಷ್ಠ" ಎಂಬ ಎನ್ ಎಸ್ ಎಸ್ ಆಶಯವನ್ನು ಕಾರ್ಯರೂಪದಲ್ಲಿ ತೋರಿಸಿದರು.

ಕಾರ್ಯಕ್ರಮದಅಧ್ಯಕ್ಷತೆವಹಿಸಿದ್ದಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ. ರಾಜಶೇಖರ ಶೇಗುಣಶಿ ಮಾತನಾಡಿ, "ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳಲ್ಲಿ ಕೇವಲ ಸೇವಾ ಮನೋಭಾವವನ್ನಷ್ಟೇ ಬೆಳೆಸುವುದಿಲ್ಲ; ಅವರಲ್ಲಿ ಸಾಮಾಜಿಕ ಜವಾಬ್ದಾರಿ, ಶಿಸ್ತು, ನಾಯಕತ್ವ, ಸಹಕಾರ ಹಾಗೂ ರಾಷ್ಟ್ರಪ್ರೇಮದ ಗುಣಗಳನ್ನು ಬೆಳೆಸುತ್ತದೆ. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಸಮಾಜಮುಖಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು" ಎಂದು ಕರೆ ನೀಡಿದರು.




ಮುಖ್ಯ ಅತಿಥಿಗಳಾದ ಪ್ರೊ. ಟಿ. ಎಸ್. ವಂಟಗುಡಿ ಮಾತನಾಡಿ, ಎನ್ ಎಸ್ ಎಸ್ ಚಟುವಟಿಕೆಗಳು ವಿದ್ಯಾರ್ಥಿಗಳನ್ನು ಸಮಾಜದೊಂದಿಗೆ ಬೆಸೆಯುವ ಮಹತ್ವದ ವೇದಿಕೆಯಾಗಿವೆ. ಸ್ವಚ್ಛತೆ ಮತ್ತು ಆರೋಗ್ಯದಂತಹ ಸಾಮಾಜಿಕ ಜವಾಬ್ದಾರಿಗಳನ್ನು ವಿದ್ಯಾರ್ಥಿಗಳು ಸ್ವಯಂಪ್ರೇರಣೆಯಿಂದ ಕೈಗೊಳ್ಳುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಕೊಡುಗೆ ನೀಡಬೇಕು ಎಂದು ಹೇಳಿದರು.

ಎನ್ ಎಸ್ ಎಸ್ ಕಾರ್ಯಕ್ರಮಾಧಿಕಾರಿಗಳಾದ ಪ್ರೊ. ಆರ್. ಡಿ. ಗಸ್ತಿ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆಯ ಮೂಲ ಆಶಯವಾದ "ಸಮಾಜ ಸೇವೆಯ ಮೂಲಕ ವ್ಯಕ್ತಿತ್ವ ವಿಕಸನ"ವನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸ್ವಯಂಸೇವಕರು ಸಮಾಜದ ಸಮಸ್ಯೆಗಳನ್ನು ಅರಿತುಕೊಂಡು, ಅವುಗಳ ಪರಿಹಾರಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಉಮಾ ಪೋಳ ಹಾಗೂ ಸಂಗಡಿಗರು ಪ್ರಾರ್ಥನೆ ಸಲ್ಲಿಸಿದರು. ಚೈತ್ರಾ ಪೂಜೇರಿ ಹಾಗೂ ಸಂಗಡಿಗರು ಸ್ವಾಗತ ಗೀತೆ ಹಾಡಿದರು. ಜ್ಯೋತಿ ಗುಬಚಿ ಹಾಗೂ ಸಂಗಡಿಗರು ಎನ ಎಸ್ ಎಸ್ ಗೀತೆಯನ್ನು ಹಾಡಿದರು. ಕಾರ್ಯಕ್ರಮದ ಪ್ರಾಸ್ತಾವಿಕ ಹಾಗೂ ಸ್ವಾಗತವನ್ನು ಪ್ರೊ. ಡಿ. ಎಂ. ನಾಯ್ಕ ನೆರವೇರಿಸಿದರು. ಪ್ರೊ. ಮಹೇಶ ಕನದಾಳ ಕಾರ್ಯಕ್ರಮವನ್ನು ನಿರೂಪಿಸಿದರು. ಪ್ರೊ. ಎಂ. ಬಿ. ಹೊಸಪೇಟಿ ವಂದನಾರ್ಪಣೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಪ್ರೊ. ಟಿ. ಎಸ್. ವಂಟಗುಡಿ, ಪ್ರೊ. ಆರ್. ಡಿ. ಗಸ್ತಿ, ಪ್ರೊ. ಎಂ. ಬಿ. ಹೊಸಪೇಟಿ, ಪ್ರೊ. ಮಹೇಶ ಕನದಾಳ, ಪ್ರಿಯಾಂಕಾ ಕುರಾಡೆ, ಎನ್. ಎಸ್. ಚಿನ್ನಕಟ್ಟಿ, ಮಲ್ಲೇಶ ಕಾಂಬಳೆ, ಸವಿತಾ ಕಾಂಬಳೆ, ಸಂಜು ಕಾಂಬಳೆ, ಸಂತೋಷ ಕಾಂಬಳೆ ಸೇರಿದಂತೆ ಬೋಧಕ ಸಿಬ್ಬಂದಿ ಹಾಗೂ ವಿದ್ಯಾರ್ಥಿ ಬಳಗ ಉಪಸ್ಥಿತರಿದ್ದರು.

## ಉಚಿತ ಆರೋಗ್ಯ ಶಿಬಿರ ಬಡವರ ಪಾಲಿನ ಸಂಜೀವಿನಿ: ಸತೀಶ ಮುಂಡಾಸದ

**ಸತ್ಯಮಿಥ್ಯ ಸುದ್ದಿಮೂಲ ರೋಣ:**
"ರೋಗ ಬಂದ ಮೇಲೆ ಚಿಕಿತ್ಸೆ ಪಡೆಯುವುದಕ್ಕಿಂತ, ರೋಗ ಬರದಂತೆ ತಡೆಗಟ್ಟುವುದು ಉತ್ತಮ. ಉಚಿತ ಆರೋಗ್ಯ ತಪಾಸಣಾ ಶಿಬಿರಗಳು ರೋಗಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆಹಚ್ಚಿ ತಡೆಗಟ್ಟುವಲ್ಲಿ ಸಂಜೀವಿನಿಯಂತೆ ಸಹಕಾರಿಯಾಗಿವೆ" ಎಂದು ಹೊಳೆ ಆಲೂರಿನ ಮಾತೋಶ್ರೀ ಫೌಂಡೇಶನ್ ಅಧ್ಯಕ್ಷರಾದ ಸತೀಶ ಮುಂಡಾಸದ ಹೇಳಿದರು.

ಬುಧವಾರ ತಾಲ್ಲೂಕಿನ ಮೆಣಸಗಿ ಗ್ರಾಮದಲ್ಲಿ ಹೊಳೆ ಆಲೂರಿನ ಮಾತೋಶ್ರೀ ಫೌಂಡೇಶನ್ (ರಿ.) ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡುತ್ತ

ಗ್ರಾಮೀಣ ಭಾಗದ ಜನರಿಗೆ ಗುಣಮಟ್ಟದ ವೈದ್ಯಕೀಯ ಸೇವೆಗಳು ಸುಲಭವಾಗಿ ದೊರೆಯಬೇಕು ಹಾಗೂ ಆರೋಗ್ಯದಬಗ್ಗೆಜಾಗೃತಿಮೂಡಿಸಬೇಕುಎಂಬಉದಾತ್ತ ಉದ್ದೇಶದಿಂದ ಈ ಶಿಬಿರವನ್ನು ಆಯೋಜಿಸಲಾಗಿದೆ ಎಂದರು.

ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 2:00 ಗಂಟೆಯವರೆಗೆ ನಡೆದ ಈ ಶಿಬಿರದಲ್ಲಿ ಮೆಣಸಗಿ ಹಾಗೂ ಸುತ್ತಮುತ್ತಲಿನ ವಿವಿಧ ಗ್ರಾಮಗಳ 150ಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹೆಗಳ ಪ್ರಯೋಜನ ಪಡೆದು–ಕೊಂಡರು.




ಶಿಬಿರದಲ್ಲಿ ಸಾರ್ವಜನಿಕರಿಗೆ ಉಚಿತ ಬಿಪಿ, ರಕ್ತದ ಸಕ್ಕರೆ ಪ್ರಮಾಣ (ಶುಗರ್), ಹೃದಯ ಸಂಬಂಧಿತ ತಪಾಸಣೆ, ಕಿವಿ ತಪಾಸಣೆ, ಮಕ್ಕಳ ಆರೋಗ್ಯ ತಪಾಸಣೆ ಹಾಗೂ ರಕ್ತದ ಗುಂಪು ತಪಾಸಣೆಗಳನ್ನು ಉಚಿತವಾಗಿ ನಡೆಸಿ ಅಗತ್ಯ ಔಷಧೋಪಚಾರಗಳನ್ನು ಸೂಚಿಸಲಾಯಿತು.

ಖ್ಯಾತವೈದ್ಯರಾದಡಾ.ಚಿದಾನಂದಮುಂಡಾಸದ(ಎಮ್ ಬಿ ಬಿ ಎಸ್ ) ಹಾಗೂ ಡಾ. ಕಿರಣ ಹಿರೇಕೆಂಚನಗೌಡರ್ (ಎಮ್ ಬಿ ಬಿ ಎಸ್) ಅವರು ಆಗಮಿಸಿದ ನೂರಾರು ಸಾರ್ವಜನಿಕರಿಗೆ ವೈದ್ಯಕೀಯ ತಪಾಸಣೆ ನಡೆಸಿ, ದಿನನಿತ್ಯದ ಆರೋಗ್ಯ ರಕ್ಷಣೆ ಮತ್ತು ಜೀವನಶೈಲಿ ಕುರಿತು ಉಪಯುಕ್ತ ಮಾರ್ಗದರ್ಶನ ನೀಡಿದರು.

ಈ ಸಂದರ್ಭದಲ್ಲಿ ಅಶೋಕ ಕೋಳಿವಾಡ, ಬಿ. ಆರ್. ಮನ್ನೆರಿ, ಸುನೀಲ ಹಬೀಬ, ಶ್ರೀಮತಿ ವಾಣಿ ಸೇರಿದಂತೆ ಆಶಾಕಾರ್ಯಕರ್ತರು ಭಾಗವಹಿಸಿದ್ದರು.

ಮಾತೋಶ್ರೀ ಫೌಂಡೇಶನ್ ಸಂಸ್ಥೆಯ ಈ ಸಾಮಾಜಿಕ ಮತ್ತು ಆರೋಗ್ಯ ಸೇವಾ ಕಾರ್ಯಕ್ಕೆ ಗ್ರಾಮಸ್ಥರು ಹಾಗೂ ಮುಖಂಡರು ತೀವ್ರ ಮೆಚ್ಚುಗೆ ವ್ಯಕ್ತಪಡಿಸಿದರು.

## ಪೌರಕಾರ್ಮಿಕರ ಸೇವೆ ಸಮಾಜಕ್ಕೆ ಮಾದರಿ: ಬಸವರಾಜ ಬಳಗಾನೂರ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ನಗರದ ಸ್ವಚ್ಛತೆ ಹಾಗೂ ಸಾರ್ವಜನಿಕರ ಆರೋಗ್ಯ ಕಾಪಾಡುವಲ್ಲಿ ಪೌರಕಾರ್ಮಿಕರ ಸೇವೆ ಅತ್ಯಂತ ಮಹತ್ವದ್ದಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ ಹೇಳಿದರು.

ನಗರದ ಕುಷ್ಟಗಿ ರಸ್ತೆಯ ಈದ್ಗಾ ಮೈದಾನದಲ್ಲಿರುವ ಶಾದಿ ಮಹಲ್‌ನಲ್ಲಿ ಗಜೇಂದ್ರಗಡ ಪೌರಕಾರ್ಮಿಕ ಸಂಘದ ವತಿಯಿಂದ ಬುಧವಾರ ಆಯೋಜಿಸಿದ್ದ 15ನೇ ವರ್ಷದ ಪೌರಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರತಿದಿನ ಬೆಳಗ್ಗಿನಿಂದಲೇ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಂಡು ನಗರವನ್ನು ಸ್ವಚ್ಛವಾಗಿಡುವ ಪೌರಕಾರ್ಮಿಕರ ಶ್ರಮವನ್ನು ಸಮಾಜ ಗೌರವಿಸಬೇಕು. ಪೌರಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸ್ಪಂದಿಸುವುದರ ಜೊತೆಗೆ ಅವರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಪುರಸಭೆಯಿಂದ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ಪುರಸಭೆಯಿಂದ ಆರಂಭವಾದ ಮೆರವಣಿಗೆಯು ಮೈಸೂರು ಮಠ, ಬಸವೇಶ್ವರ ವೃತ್ತ, ದುರ್ಗಾ ವೃತ್ತ, ಅಂಬೇಡ್ಕರ್ ವೃತ್ತ, ಶಿವಾಜಿ ವೃತ್ತ ಹಾಗೂ ಕಾಲಕಾಲೇಶ್ವರ ವೃತ್ತದ ಮೂಲಕ ಸಾಗಿಶಾದಿಮಹಲ್‌ತಲುಪಿತು. ಈಸಂದರ್ಭದಲ್ಲಿಶಾಖಾ ಅಧ್ಯಕ್ಷ ಸಿ.ಡಿ.ದೊಡ್ಡಮನಿ ಹಾಗೂ ಶಾಖಾ ಕಾನೂನು ಸಲಹೆಗಾರ ಶಿವಕುಮಾರ ಇಲ್ಲಾಳ ಮಾತನಾಡಿ, ಪೌರಕಾರ್ಮಿಕರ ಹಕ್ಕುಗಳು, ಕರ್ತವ್ಯಗಳು ಹಾಗೂ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ವಿವರಿಸಿದರು.



ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಶಿವಪ್ಪ ಮಾದರ, ಕಾರ್ಯದರ್ಶಿ ಮಲ್ಲಿಕಾರ್ಜುನ, ಖಜಾಂಚಿ ಎಂ.ಎಂ. ತೋಟದ, ಸಂಘಟನಾ ಕಾರ್ಯದರ್ಶಿ ಪಿ.ಎನ್. ದೊಡ್ಡಮನಿ, ರಾಘು ಮಂತಾ ಸೇರಿದಂತೆ ಪುರಸಭೆಯ ಪೌರಕಾರ್ಮಿಕರು ಉಪಸ್ಥಿತರಿದ್ದರು.

## ಬೀರಲಿಂಗೇಶ್ವರ ದೇವಸ್ಥಾನದಿಂದ ಮಠದವರೆಗೆ ಸಾಗಿದ ಮೆರವಣಿಗೆ

**ಸತ್ಯಮಿಥ್ಯ ಸುದ್ದಿಮೂಲ ಬಾಗಲಕೋಟೆ:**
ಚನ್ನಸಂಗಮೇಶ್ವರ ಮಹಾರಾಜರ ಜಾತ್ರಾ ಮಹೋತ್ಸವವು ಭಕ್ತರ ಪಾಲಿಗೆ ಪವಿತ್ರ ಹಾಗೂ ಮಹತ್ವದ ಧಾರ್ಮಿಕ ಸಂದರ್ಭವಾಗಿದೆ. ಜಾತ್ರೆಯ ಅಂಗವಾಗಿ ನಡೆಯುವ ರೊಟ್ಟಿ ಬುತ್ತಿ ಕಾರ್ಯಕ್ರಮವು ಕೇವಲ ಧಾರ್ಮಿಕ ಆಚರಣೆಯಾಗಿರದೆ, ನಮ್ಮ ಗ್ರಾಮೀಣ ಸಂಸ್ಕೃತಿ, ಪರಂಪರೆ ಮತ್ತು ಭಕ್ತಿಯ ಪ್ರತೀಕವಾಗಿದೆ ಎಂದು ಬಾಡಗಿ ಮಠದ ಶ್ರೀ ಸಿದ್ದಲಿಂಗ ಸಾಧು ಮಹಾರಾಜರು ಹೇಳಿದರು.

ಅಥಣಿ ತಾಲೂಕಿನ ಅರಟಾಳ ಸಮೀಪದ ಬಾಡಗಿ ಗ್ರಾಮದಲ್ಲಿ ಸಿದ್ಧಪುರುಷ, ಮಹಾನ್ ಧನ್ವಂತರಿ ಶ್ರೀ ಸ.ಸ. ಚನ್ನಸಂಗಮೇಶ್ವರ ಮಹಾರಾಜರ ಜಾತ್ರಾ ಮಹೋತ್ಸವದ ನಿಮಿತ್ತ ಭಕ್ತಿಭಾವದ ರೊಟ್ಟಿ ಬುತ್ತಿ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು.

ಚನ್ನಸಂಗಮೇಶ್ವರ ಮಹಾರಾಜರ ಜಾತ್ರಾ ಮಹೋತ್ಸವವು ಭಕ್ತರ ಧಾರ್ಮಿಕ ನಂಬಿಕೆ ಹಾಗೂ ಪರಂಪರೆಯನ್ನು ಮತ್ತಷ್ಟು ಗಟ್ಟಿಗೊಳಿಸುವ ಪವಿತ್ರ ಸಂದರ್ಭವಾಗಿದೆ. ರೊಟ್ಟಿ ಬುತ್ತಿ ಕಾರ್ಯಕ್ರಮದ ಮೂಲಕ ಭಕ್ತರು ಒಗ್ಗಟ್ಟಿನಿಂದ ಭಾಗವಹಿಸಿರುವುದು ಗ್ರಾಮದ ಧಾರ್ಮಿಕ ಪರಂಪರೆ ಹಾಗೂ ಭಕ್ತಿಭಾವಕ್ಕೆ ಸಾಕ್ಷಿಯಾಗಿದೆ ಹೇಳಿದರು.

ಜಾತ್ರಾ ಮಹೋತ್ಸವದ ಅಂಗವಾಗಿ ಗ್ರಾಮದ ಶ್ರೀ ಹನುಮಾನ್ ದೇವಸ್ಥಾನದಿಂದ ರೊಟ್ಟಿ ಬುತ್ತಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮಹಿಳೆಯರು, ಯುವಕರು, ಹಿರಿಯರು ಸೇರಿದಂತೆ ಭಕ್ತರು ಶ್ರದ್ಧೆಯಿಂದ ರೊಟ್ಟಿ ಬುತ್ತಿ ಹೊತ್ತು ಮೆರವಣಿಗೆಯಲ್ಲಿ ಪಾಲ್ಗೊಂಡರು. ಸಾಂಪ್ರದಾಯಿಕ ವಾತಾವರಣದಲ್ಲಿ ಸಾಗಿದ ಮೆರವಣಿಗೆ ಚನ್ನಸಂಗಮೇಶ್ವರ ಸಾಧು ಮಹಾರಾಜರ ಮಠದವರೆಗೆ ತಲುಪಿತು.

ಮೆರವಣಿಗೆಯುದ್ದಕ್ಕೂ ಭಕ್ತರು ಧಾರ್ಮಿಕ ಘೋಷಣೆಗಳನ್ನು ಮೊಳಗಿಸಿ, ಮಹಾರಾಜರ ಸ್ಮರಣೆ ಮಾಡುತ್ತಾ ಸಾಗಿದರು. ರೊಟ್ಟಿ ಬುತ್ತಿ ಕಾರ್ಯಕ್ರಮದ ಮೂಲಕ ಭಕ್ತರು ತಮ್ಮ ಭಕ್ತಿಯನ್ನು ಸಮರ್ಪಿಸುವುದರ ಜೊತೆಗೆ, ಗ್ರಾಮಸ್ಥರ ನಡುವೆ ಸಾಮರಸ್ಯ, ಒಗ್ಗಟ್ಟು ಮತ್ತು ಸಹೋದರತ್ವದ ಭಾವನೆ ಮೂಡಿಸಿದರು.

ಮಠಕ್ಕೆ ಮೆರವಣಿಗೆ ತಲುಪಿದ ಬಳಿಕ ಧಾರ್ಮಿಕ ವಿಧಿವಿಧಾನಗಳು ನೆರವೇರಿಸಲಾಯಿತು. ಭಕ್ತರು ಚನ್ನಸಂಗಮೇಶ್ವರ ಮಹಾರಾಜರ ದರ್ಶನ ಪಡೆದು ಆಶೀರ್ವಾದ ಪಡೆದರು. ಜಾತ್ರೆಯ ಹಿನ್ನೆಲೆಯಲ್ಲಿ ಮಠದ ಆವರಣ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಭಕ್ತರ ಸಂಭ್ರಮ ಮನೆಮಾಡಿತ್ತು.

ಭಕ್ತರು ಒಗ್ಗಟ್ಟಿನಿಂದ ರೊಟ್ಟಿ ಬುತ್ತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ಸಂತಸ ತಂದಿದೆ. ಇಂತಹ ಧಾರ್ಮಿಕ ಆಚರಣೆಗಳು ಯುವ ಪೀಳಿಗೆಗೆ ನಮ್ಮ ಸಂಪ್ರದಾಯ ಮತ್ತು ಸಂಸ್ಕೃತಿಯ ಮಹತ್ವವನ್ನು ಪರಿಚಯಿಸುವಲ್ಲಿ ಸಹಕಾರಿಯಾಗುತ್ತವೆ. ಎಲ್ಲರಲ್ಲೂ ಸಹೋದರತ್ವ, ಶಾಂತಿ ಮತ್ತು ಸೌಹಾರ್ದತೆ ಬೆಳೆಸುವ ಸಂಕಲ್ಪದೊಂದಿಗೆ ಜಾತ್ರಾ ಮಹೋತ್ಸವ ಆಚರಿಸಬೇಕು ಎಂದು ಅವರು ಹೇಳಿದರು. ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಬಾಡಗಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದಲೂ ಭಕ್ತರು ಆಗಮಿಸಿ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಮಠದ ಆವರಣದಲ್ಲಿ ಭಕ್ತರಿಗೆ ಪ್ರಸಾದ ವಿತರಣೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಕಾರ್ಯಕ್ರಮದಲ್ಲಿ ಮಠದ ಭಕ್ತರು, ಗ್ರಾಮಸ್ಥರು, ಮಹಿಳೆಯರು, ಯುವಕರು, ಹಿರಿಯರು ಸೇರಿದಂತೆ ಅಪಾರ ಸಂಖ್ಯೆಯ ಭಕ್ತರು ಭಾಗವಹಿಸಿದ್ದರು. ಜಾತ್ರಾ ಮಹೋತ್ಸವವು ಭಕ್ತಿಭಾವ ಹಾಗೂ ಸಂಭ್ರಮದಿಂದ ನಡೆಯಿತು. ಇದೇ ಸಂದರ್ಭದಲ್ಲಿ ಗುರುಪಾದ ಶರಣು ಹಿಪ್ಪರಗಿ, ಶಿವಾನಂದ ಶರಣರು ಹಿಪ್ಪರಗಿ, ಸಿದ್ಧಾರೂಢ ಶರಣರು ಹಿಪ್ಪರಗಿ, ಮಹಿಳೆಯರಾದ ರೇಖಾ ಹಳ್ಳಿ ಕಸ್ತೂರಿ ಹೀರಗೊಂಡ. ಸಾಯವ್ವ ಮೈಗೂರ ಲಕ್ಷ್ಮೀಬಾಯಿ ಬಿಜ್ಜರಗಿ ಕಲಾವತಿ ಮ್ಯಾಗೇಡಿ. ಮಂಜುಳಾ ಮುಧೋಳ. ದ್ರೌಪದಿ ಮಮದಾಪುರ. ಸಿದ್ದು ಹಳ್ಳಿ ಸಿದ್ದು ಜೋಗಾನಿ ಚೆನ್ನಪ್ಪ ನೇಮಗೋಡ ವಿಠ್ಠಲ್ ಮುಧೋಳ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



# ಪಶ್ಚಿಮ ಪದವೀಧರ ಮತಕ್ಷೇತ್ರ ಚುನಾವಣೆ : ನೀತಿ ಸಂಹಿತೆ ಕಟ್ಟುನಿಟ್ಟಿನ ಪಾಲನೆಗೆ ಸೂಚನೆ

## ಸೆ. 29ರಂದು ಚುನಾವಣಾ ಅಧಿಸೂಚನೆ ಪ್ರಕಟ । ಅ. 23ರಂದು ಮತದಾನ । ಡಿಸಿ ಸಿ.ಎನ್. ಶ್ರೀಧರ ಸೂಚನೆ

**ಸತ್ಯಮಿಥ್ಯ ಸುದ್ದಿಮೂಲ ಗದಗ :**
ಕರ್ನಾಟಕ ಪಶ್ಚಿಮ ಪದವೀಧರ ಮತಕ್ಷೇತ್ರದ ದ್ವೈವಾರ್ಷಿಕ ಚುನಾವಣೆಗೆ ವೇಳಾಪಟ್ಟಿ ಪ್ರಕಟವಾಗಿದ್ದು, ಜಿಲ್ಲಾದ್ಯಂತ ಚುನಾವಣಾ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಯಾವುದೇ ರೀತಿಯ ಚುನಾವಣಾ ಅಕ್ರಮಗಳಿಗೆ ಅವಕಾಶ ನೀಡಬಾರದು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಬುಧವಾರ ಕರ್ನಾಟಕ ಪಶ್ಚಿಮ ಪದವೀಧರ ಮತಕ್ಷೇತ್ರದ ಚುನಾವಣೆಯ ಮಾದರಿ ನೀತಿ ಸಂಹಿತೆ ಪಾಲನೆ ಕುರಿತು ಅಧಿಕಾರಿಗಳು ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾರತ ಚುನಾವಣಾ ಆಯೋಗವು ಕರ್ನಾಟಕ ಪಶ್ಚಿಮ ಪದವೀಧರ ಮತಕ್ಷೇತ್ರದ ಚುನಾವಣೆ–2026ಕ್ಕೆ ವೇಳಾಪಟ್ಟಿ ಪ್ರಕಟಿಸಿದೆ. ಅದರಂತೆ ಸೆಪ್ಟೆಂಬರ್ 29ರಂದು ಚುನಾವಣಾ ಅಧಿಸೂಚನೆ ಪ್ರಕಟವಾಗಲಿದ್ದು, ಅಕ್ಟೋಬರ್ 6ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದೆ. ಅಕ್ಟೋಬರ್ 7ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಅಕ್ಟೋಬರ್ 9ರಂದು ಉಮೇದುವಾರಿಕೆ ಹಿಂಪಡೆಯಲು ಕೊನೆಯ ದಿನವಾಗಿದೆ.

ಅಕ್ಟೋಬರ್ 23ರಂದು ಮತದಾನ ನಡೆಯಲಿದ್ದು, ಬೆಳಿಗ್ಗೆ 8ರಿಂದ ಸಂಜೆ 4ರವರೆಗೆ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಅಕ್ಟೋಬರ್ 27ರಂದು ಮತಗಳ ಎಣಿಕೆ ನಡೆಯಲಿದ್ದು, ಅಕ್ಟೋಬರ್ 31ರಂದು ಸಂಪೂರ್ಣ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಜಿಲ್ಲಾಧಿಕಾರಿ ಮಾಹಿತಿ



ನೀಡಿದರು.

ಚುನಾವಣಾ ಪ್ರಕ್ರಿಯೆಯನ್ನು ಸುಗಮ, ಪಾರದರ್ಶಕ ಹಾಗೂ ಶಾಂತಿಯುತವಾಗಿ ನಡೆಸಲು ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಸಿದ್ಧತೆಗಳನ್ನುಕೈಗೊಳ್ಳಬೇಕು.ಚುನಾವಣಾಆಯೋಗದನಿರ್ದೇಶನಗಳು ಹಾಗೂ ಮಾದರಿ ನೀತಿ ಸಂಹಿತೆಯನ್ನು ಯಾವುದೇ ಲೋಪವಿಲ್ಲದೆ ಜಾರಿಗೊಳಿಸಬೇಕು ಎಂದು ಅವರು ಸೂಚಿಸಿದರು.

ಚುನಾವಣೆ ಘೋಷಣೆಯಾದ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 22ರಿಂದಲೇ ಜಿಲ್ಲೆಯಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದೆ. ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ರಾಜಕೀಯ ಪಕ್ಷಗಳ ಮುಖಂಡರ ಭಾವಚಿತ್ರ ಹೊಂದಿರುವ ಬಂಟಿಂಗ್, ಬ್ಯಾನರ್, ಪೋಸ್ಟರ್ ಸೇರಿದಂತೆಪ್ರಚಾರಸಾಮಗ್ರಿಗಳನ್ನುತೆರವುಗೊಳಿಸುವಕಾರ್ಯವನ್ನು24 ಗಂಟೆಯೊಳಗೆ ಪೂರ್ಣಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿದೆ ಎಂದು ತಿಳಿಸಿದರು.

**ಜಿಲ್ಲೆಯಲ್ಲಿ 23 ಮತದಾನ ಕೇಂದ್ರಗಳು:** ಅಪರ ಜಿಲ್ಲಾಧಿಕಾರಿ ಡಾ. ದುರಗೇಶ ಕೆ.ಆರ್. ಮಾತನಾಡಿ, ಕರ್ನಾಟಕ ಪಶ್ಚಿಮ ಪದವೀಧರ ಮತಕ್ಷೇತ್ರದ ಚುನಾವಣೆಗೆ ಗದಗ ಜಿಲ್ಲೆಯಲ್ಲಿ ಒಟ್ಟು 23 ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಜಿಲ್ಲೆಯಲ್ಲಿ 12,726 ಪುರುಷರು ಹಾಗೂ 7,353 ಮಹಿಳೆಯರು ಸೇರಿದಂತೆ ಒಟ್ಟು 20,079 ಪದವೀಧರ ಮತದಾರರು ನೋಂದಾಯಿತರಾಗಿದ್ದಾರೆ ಎಂದು ಮಾಹಿತಿ ನೀಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮುಕುಲ್ ಜೈನ್ ಮಾತನಾಡಿ, ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿಚುನಾವಣಾಆಯೋಗದನಿರ್ದೇಶನದಂತೆಮತದಾರರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳಬೇಕು. ವಿಶೇಷವಾಗಿ ಮತದಾನದಿಂದ ದೂರ ಉಳಿಯುವ ಸಾಧ್ಯತೆ ಇರುವ ಮತದಾರರನ್ನು ಪ್ರೇರೇಪಿಸಿ, ಚುನಾವಣಾ ಪ್ರಕ್ರಿಯೆಯಲ್ಲಿ ತಪ್ಪದೇ ಭಾಗವಹಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಉಪವಿಭಾಗಾಧಿಕಾರಿ ಗಂಗಪ್ಪ ಎಂ., ಆಹಾರ ಇಲಾಖೆ ಉಪನಿರ್ದೇಶಕ ಎಂ.ಎಸ್. ಪಾಟೀಲ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟೂರ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಡಾ. ನಂದಾ ಹಣಬರಟ್ಟಿ, ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಎ.ಎ. ಕಂಬಾಳಿಮಠ, ಶ್ರೀನಿವಾಸ ಮೂರ್ತಿ, ವಸಂತ ಮಡ್ಲೂರ, ಎಂ.ಎಂ. ತುಂಬರಮಟ್ಟಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಹಜರತ ಸೈಯದ್ ಶಹಾ ಮೆಹಬೂಬ ಸುಬ್ಬಾನಿ ಉರುಸ್ ಅಂಗವಾಗಿ ಅನ್ನ ಸಂತರ್ಪಣೆ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ :**
ನಗರದಕೋಟೆಯಮೇಲಿರುವಹಜರತಸೈಯದ್ ಶಹಾ ಮೆಹಬೂಬ ಸುಬ್ಬಾನಿ ಅವರ ಉರುಸ್ ಅಂಗವಾಗಿ ಭಕ್ತರು ಹಾಗೂ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಉರುಸ್‌ಅಂಗವಾಗಿಧಾರ್ಮಿಕಕಾರ್ಯಕ್ರಮಗಳು ನೆರವೇರಿದ ಬಳಿಕ ಅನ್ನ ಸಂತರ್ಪಣೆ ನಡೆಯಿತು.

ನಗರದ ವಿವಿಧ ಭಾಗಗಳಿಂದ ಆಗಮಿಸಿದ್ದ ಭಕ್ತರು ಹಾಗೂ ಸಾರ್ವಜನಿಕರು ಅನ್ನ ಸಂತರ್ಪಣೆಯಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಉರುಸ್ ಸಮಿತಿ ಸದಸ್ಯರು, ಧಾರ್ಮಿಕ ಮುಖಂಡರು, ಭಕ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶಾಂತಿ, ಸೌಹಾರ್ದತೆ ಹಾಗೂ ಭಕ್ತಿಭಾವದಿಂದ ನೆರವೇರಿಸಲಾಯಿತು.



# ರೈತರೇ ರಸ್ತೆ ದುರಸ್ತಿ ಮಾಡುವಂತ ಪರಿಸ್ಥಿತಿ ;ಜನಪ್ರತಿನಿಧಿಗಳು ಗಮನಹರಿಸಲು ಆಗ್ರಹ

**ಸತ್ಯಮಿಥ್ಯ ಸುದ್ದಿಮೂಲ ಮುಗಳಖೋಡ:**
ಪಟ್ಟಣದ ವಾರ್ಡ್ ಸಂಖ್ಯೆ 15 ಮತ್ತು 16ರ ವ್ಯಾಪ್ತಿಯಲ್ಲಿ ಬರುವ ಶ್ರೀ ಉಣ್ಣಿಬಸವೇಶ್ವರ ದೇವಸ್ಥಾನದಿಂದ ದಾಸರತೋಟದ ವರೆಗೆ 2 ಕಿ.ಮೀ ಮತ್ತು ಹಿರಿಯಾರ ಹಳ್ಳದವರೆಗೆ 2 ಕಿ.ಮಿ ಒಟ್ಟು 4 ಕಿ.ಮೀ. ಉದ್ದದ ಡಾಂಬರಿ ರಸ್ತೆ ಹಲವು ದಿನಗಳಿಂದ ಹದಗೆಟ್ಟಿದ್ದು, ರಸ್ತೆಯುದ್ದಕ್ಕೂ ಗುಂಡಿಗಳು ಹಾಗೂ ಗಿಡಗಂಟಿಗಳು ಬೆಳೆದು ಸಾರ್ವಜನಿಕರ ಸಂಚಾರಕ್ಕೆ ತೀವ್ರ ತೊಂದರೆ–ಯಾಗುತ್ತಿತ್ತು.

ಈ ರಸ್ತೆಯನ್ನು ಶಾಲಾ ಮಕ್ಕಳು, ಮಹಿಳೆಯರು, ವೃದ್ಧರು ಸೇರಿದಂತೆ ನಿತ್ಯ ನೂರಾರು ಜನರು ಬಳಸುತ್ತಿದ್ದು, ಶಾಲಾ ವಾಹನಗಳು ಹಾಗೂ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ವಾಹನಗಳ ಸಂಚಾರಕ್ಕೂ ಸಮಸ್ಯೆಯಾಗಿದೆ. ಮಳೆಗಾಲದಲ್ಲಿ ರಸ್ತೆಯ ಗುಂಡಿಗಳಲ್ಲಿ ನೀರು ನಿಲ್ಲುವುದರಿಂದ ಸಮಸ್ಯೆ ಮತ್ತಷ್ಟು ಉಲ್ಬಣಗೊಂಡಿದೆ

ರಸ್ತೆಯ ದುಸ್ಥಿತಿಯಿಂದ ಬೇಸತ್ತ ಸ್ಥಳೀಯ ರೈತರು, ಜನಪ್ರತಿನಿಧಿಗಳು ಹಾಗೂ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗಾಗಿ ಕಾಯದೆ ತಮ್ಮ ಸ್ವಂತ ಹಣ ಹಾಗೂ ಶ್ರಮದಿಂದ ಗಿಡಗಂಟಿಗಳನ್ನು ತೆರವುಗೊಳಿಸಿ, ರಸ್ತೆ ಬದಿಗಳನ್ನು ಸ್ವಚ್ಛಗೊಳಿಸಿ, ಗುಂಡಿಗಳನ್ನುಮುಚ್ಚುವ ಮೂಲಕ ತಾತ್ಕಾಲಿಕವಾಗಿ ರಸ್ತೆ ದುರಸ್ತಿ ಮಾಡಿದ್ದಾರೆ.

ಈ ಭಾಗದ ಶಾಸಕರು ಮಹೇಂದ್ರ ತಮ್ಮಣ್ಣವರ ಹಾಗೂ ಸಂಬಂಧಿಸಿದ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ರಸ್ತೆಯ ಸ್ಥಿತಿಯನ್ನು ಪರಿಶೀಲಿಸಿ, ಸುಮಾರು 4 ಕಿ.ಮೀ. ತಾತ್ಕಾಲಿಕ ದುರಸ್ತಿ ಮಾಡಿದ ರಸ್ತೆ ಸೇರಿದಂತೆ ವಾರ್ಡ ಸಂಖ್ಯೆ 16 ರಲ್ಲಿ ದಾಸರತೋಟದಿಂದ ಹರಣಕೋಡಿ ತೆ–ೂೀಟದ ವರೆಗಿನ ಸುಮಾರು 5 ಕಿ.ಮೀ ಉದ್ದ ರಸ್ತೆಯನ್ನು ಗುಣಮಟ್ಟದ ಡಾಂಬರೀಕರಣಗೊಳಿಸಿ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಪ್ರಗತಿಪರ ರೈತ ನೇಮಣ್ಣ ಬಾಳಿಕಾಯಿ ಆಗ್ರಹಿಸಿ ಶಾಸಕರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ರೈತರು ತಮ್ಮ ಸ್ವಂತ ಹಣ ಮತ್ತು ಶ್ರಮದಿಂದ ರಸ್ತೆ ದುರಸ್ತಿ ಮಾಡಿರುವ ಕಾರ್ಯ ಸಾಮಾಜಿಕ ಕಳಕಳಿಗೆ ಮಾದರಿಯಾಗಿದ್ದು, ಇದೀಗ ಸರ್ಕಾರ ಮತ್ತು ಜನಪ್ರತಿನಿಧಿಗಳು ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕಾಗಿದೆ.

ಈ ಸಂದರ್ಭದಲ್ಲಿ ಪ್ರತಿಪರ ರೈತ ನೆಮಣ್ಣಾ ಬಾಳಿಕಾಯಿ, ಸಂಜು ಹಿಪ್ಪರಗಿ, ಶಾಂತಿನಾಥ ಬಾಳಿಕಾಯಿ, ರವಿ ಗದಗ, ಧರೆಪ್ಪ ಅಂಬೋಜಿ, ಶಿವಾನಂದ ಹುಬ್ಬಳ್ಳಿ ರಾಜಶೇಖರ ಜಾಗನೂರ ಮತ್ತು ಮುಖಂಡರು ರೈತರು ಇದ್ದರು.



# ಕೊಪ್ಪಳ, ಅಸ್ಸಾಂ, ಲಡಾಖ್ ಇಲ್ಲಿಯೇ ಯಾಕೆ ಪರಿಸರ ನಾಶದ ಹೂಡಿಕೆ: ಚಿತ್ರ ನಟ ಪ್ರಕಾಶ ರೈ

**329ನೇ ದಿನದ ಬಲ್ಡೋಟ ಹಾಗೂ ಮಾಲಿನ್ಯ ವಿರೋಧಿ ಧರಣಿಗೆ ಖ್ಯಾತ ನಟ ಪ್ರಕಾಶ ರೈ ಬೆಂಬಲ**

**ಸತ್ಯಮಿಥ್ಯ ಸುದ್ದಿಮೂಲ ಕೊಪ್ಪಳ:**
"ಇಲ್ಲಿನ ಪರಿಸರದ ಸಮಸ್ಯೆ ತುಂಬಾ ಆಳವಾದದ್ದು. ಇದ–ರಿಂದಪಾರಾಗಲುಕೊಪ್ಪಳದಜನಬಹಳದೊಡ್ಡಹೋರಾಟ ನಡೆಸುತ್ತಿದ್ದಾರೆ. ನಾನು ಗಂಭೀರವಾಗಿ ಗಮನಿಸುತ್ತಿದ್ದೇನೆ. ಗೆಳೆಯರೊಂದಿಗೆ ಸೇರಿ ಹೆಚ್ಚಿನ ಅಧ್ಯಯನ ನಡೆಸುತ್ತೇನೆ. ಇದೇ ಅಕ್ಟೋಬರ್ 31 ಈ ಹೋರಾಟಕ್ಕೆ ಒಂದು ವರ್ಷ. ಆ ದಿನ ಕೊಪ್ಪಳಕ್ಕೆ ಬರಲು ಕಾತುರನಾಗಿದ್ದೇನೆ" ಎಂದು ಖ್ಯಾತ ಚಲನಚಿತ್ರ ನಟ, ಸಾಮಾಜಿಕ ಹೋರಾಟಗಾರ ಪ್ರಕಾಶ ರೈ ಇಂದು ಧರಣಿ ವೇದಿಕೆಯಲ್ಲಿ ಮಾತನಾಡಿದರು. ಒಂದು ಕಾರ್ಯಕ್ರಮ ನಿಮಿತ್ಯ ಬಂದಿದ್ದೇನೆ. ಕೊಪ್ಪಳ ಹೋರಾಟಕ್ಕೆ ಇಷ್ಟು ಕಡಿಮೆ ಸಮಯ ಕೊಟ್ಟದ್ದು ಮನಸ್ಸು ಒಪ್ಪುತ್ತಿಲ್ಲ. ಸಾಕಷ್ಟು ಸಮಯವನ್ನು ಈ ನಿಮ್ಮ ಹೋರಾಟಕ್ಕೆ ಮುಡಿಪಾಗಿಡುತ್ತೇನೆ ಎಂದರು.

ನಗರಸಭೆ ಆವರಣದಲ್ಲಿ ಬಲ್ಡೋಟ ತೊಲಗಲಿ, ಕೊಪ್ಪಳ ಉಳಿಯಲಿ,ಮಾಲಿನ್ಯನಿಯಂತ್ರಿಸಿಇಲ್ಲವೆಕಾರ್ಖಾನೆಗಳನ್ನು ಬಂದ್ ಮಾಡಿ, ತುಂಗಭದ್ರಾ ಎದುರಿಸುತ್ತಿರುವ ಮಾಲಿನ್ಯ ಮತ್ತು ಕಾರ್ಖಾನೆ ನೀರಿನ ಕಬಳಿಕೆ ತಡೆದು ಅಚ್ಚುಕಟ್ಟು ರೈತರ ನೀರಾವರಿಗೆ ನೀರು ಮೀಸಲಿಡಿ, ಬಸಾಪುರ ಕೆರೆಯನ್ನು ಬಲ್ಡೋಟ ಅತಿಕ್ರಮಣದಿಂದ ಮುಕ್ತಗೊಳಿಸಿ ಎಂದು ಆಗ್ರಹಿಸಿ 329ನೇ ದಿನದಲ್ಲಿ ಧರಣಿ ಮುಂದುವರೆದಿದೆ.

ನಟ ಪ್ರಕಾಶ ರೈ ಮಾತು ಮುಂದುವರೆಸಿ ಇಡೀ ದೇಶದಲ್ಲಿ ಇಂತಹ ಕಾರ್ಖಾನೆಗಳು ಎಲ್ಲೆಲ್ಲಿ ಸ್ಥಾಪನೆ ಮಾಡಲಾಗುತ್ತದೆಯೋ ಅಲ್ಲಿ ವರ್ಲ್ಡ್ ಬ್ಯಾಂಕ್, ಕೇಂದ್ರ ಹಣಕಾಸು ಸಂಸ್ಥೆಗಳು ಸಾಲ ಕೊಡುತ್ತವೆ. ಇಂಥ ಹೂಡಿಕೆಗಳಿಗೆ ಕೊಪ್ಪಳ, ಅಸ್ಸಾಂ, ಲಡಾಖ್ ಯಾಕೆ ಬೇಕು? ಇಂತಹ ಹೂಡಿಕೆಗಳು ದೇಶದ ಹಲವು ಕಡೆ ಮಾಡಲಾಗುತ್ತಿದ್ದು ಇದು ಕೇವಲ ಕೊಪ್ಪಳ ಎದುರಿಸುವ ಸಮಸ್ಯೆಯಲ್ಲ. ಇಡೀ ದೇಶ ಈ ಸಮಸ್ಯೆ ಎದುರಿಸುತ್ತಿದೆ.




ಅಮೆರಿಕಾ, ನ್ಯೂಜಿಲ್ಯಾಂಡ್ ಮುಂತಾದ ಕಡೆ ಯಾಕೆ ಇಂಥ ಹೂಡಿಕೆಗಳನ್ನು ತಿರಸ್ಕರಿಸಲಾಗುತ್ತದೆ. ಕೇಂದ್ರ ಅಥವಾ ರಾಜ್ಯ ಸರ್ಕಾರವಾಗಲೀ ಪರಿಸರ ಹಾನಿ ಬಗ್ಗೆ ಗೊತ್ತಿದ್ದು ಹೂಡಿಕೆಗಳನ್ನು ಪ್ರೋತ್ಸಾಹ ಮಾಡಿ ಪರಿಸರ ನಾಶವನ್ನು ಏಕೆ ಮಾಡುತ್ತೀರಿ ಎಂದು ಸರ್ಕಾರಗಳನ್ನು ಪ್ರಶ್ನಿಸಬೇಕಿದೆ. ಜನರಿಗೆ ಸಾಲ, ಬಡ್ಡಿ ಹೊರೆಯಾಗಿದೆ. ಇತ್ತ ಪರಿಸರ ಮಾಲಿನ್ಯದಿಂದಪ್ರಕೃತಿವಿಕೋಪದಿಂದಬದುಕುಕಟ್ಟಿಕೊಳ್ಳಲು ಆಗುತ್ತಿಲ್ಲ. ಇಲ್ಲಿ ಹಣಕಾಸು ಹರಿಯುವಿಕೆಯಿಂದ ಮಾಲಿನ್ಯ, ಆರೋಗ್ಯದ ಮಾಲಿನ್ಯವಾಗುತ್ತಿದೆ. ವಿಶಾಖಪಟ್ಟಣದಲ್ಲಿ ಸೆಮಿ ಕಂಡಕ್ಟರ್ ಘಟಕ ಸ್ಥಾಪಿಸುತ್ತಿದ್ದು ಇದು ಬಹಳ ದೊಡ್ಡ ಮಾಲಿನ್ಯ ಮಾಡುವ, ನೀರು ಅತೇಚ್ಛವಾಗಿ ಬೇಡುವ ಕಾರ್ಖಾನೆಯಾಗಿದೆ. ಈ ಕಾರ್ಖಾನೆಗಳ ಲಾಭ ಹೂಡಿಕೆದಾರರಿಗೆ, ಇಲ್ಲಿನ ಜನರಿಗೆ ಅನಾರೋಗ್ಯ, ಪರಿಸರ ಹಾನಿ ಮಾತ್ರ ಉಳಿಯುತ್ತದೆ. ಇದರಿಂದ ಜನರು ಎಚ್ಚೆತ್ತುಕೊಳ್ಳಬೇಕು. ಜನಾಂದೋಲನ ರೂಪಿಸಿಕೊಂಡು ಮುಂದಿನ ಭವಿಷ್ಯ ಉಳಿಯಲು ದೊಡ್ಡ ಪ್ರಮಾಣದಲ್ಲಿ ಹೋರಾಡಬೇಕು ಎಂದರು.

ಧರಣಿಯಲ್ಲಿ ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ (ಜಂಟಿ ಕ್ರಿಯಾ ವೇದಿಕೆ) ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು, ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ, ಮಂಜುನಾಥಜಿ.ಗೊಂಡಬಾಳ,ಪ್ರಕಾಶಕಡಿ.ಎಂ.ಬಡಿಗೇರ, ಡಿ.ಎಚ್.ಪೂಜಾರ, ಸಾವಿತ್ರಿ ಮುಜುಮದಾರ, ಜ್ಯೋತಿ ಗೊಂಡಬಾಳ, ವಿದ್ಯಾ ನಾಲವಾಡ, ರವಿ ಕಾಂತನವರ, ಚಿತ್ರ ಕಲಾವಿದ ರಾಜು ತೇರದಾಳ, ಪಂಪಣ್ಣ ಚಿಂತಪಲ್ಲಿ, ಮಹಾದೇವಪ್ಪ ಮಾವಿನಮಡು, ಶಿವಪ್ಪ ಜಲ್ಲಿ, ಸುಭಾನ್ ಸಾಬ್ ನೀರಲಗಿ, ಶರಣು ಗಡ್ಡಿ, ದುರ್ಗೇಶ ಬರಗೂರು, ಗಂಗಪ್ಪ ಡಂಬಳ ಇನ್ನೂ ಹಲವರು ಪಾಲ್ಗೊಂಡರು.

# ಆಯುರ್ವೇದವು ಸಮಗ್ರ ಆರೋಗ್ಯಕ್ಕೆ ಭದ್ರ ಬುನಾದಿ: ಜಿಲ್ಲಾ ಆಯುಷ್ ಅಧಿಕಾರಿ ಡಾ. ಪರ್ವತ ಹಿರೇಗೌಡರ

**ಸತ್ಯಮಿಥ್ಯ ಸುದ್ದಿಮೂಲ ಕೊಪ್ಪಳ :**
ಆಯುರ್ವೇದವು ಸಮಗ್ರ ಆರೋಗ್ಯಕ್ಕೆ ಭದ್ರ ಬುನಾದಿಯಾಗಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ. ಪರ್ವತ ಬ. ಹಿರೇಗೌಡರ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ, ಎನ್.ಐ.ಎಂ.ಎ., ಎ.ಎಫ್.ಐ., ಅಗಸ್ತ್ಯ ಆಯುರ್ವೇದ ಮಹಾವಿದ್ಯಾಲಯ, ದದೇಗಲ್‌ನ ಎಸ್.ಎ. ನಿಂಗೋಜಿ ಆಯುರ್ವೇದ ಮಹಾವಿದ್ಯಾಲಯ ಹಾಗೂ ಶ್ರೀ ಜಗದ್ಗುರು ಗವಿಸಿದ್ದೇಶ್ವರ ಆಯುರ್ವೇದ ಮಹಾವಿದ್ಯಾಲಯಗಳ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಬುಧವಾರ (ಸೆ. 23ರಂದು) ಹಮ್ಮಿಕೊಂಡಿದ್ದ 11ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

"ಸ್ವಸ್ಥ ನಾಳೆಗಳಿಗಾಗಿ ಆಯುರ್ವೇದ" ಎಂಬ ಧ್ಯೇಯವಾಕ್ಯದೊಂದಿಗೆ 11ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಆಯುರ್ವೇದ ಸಸ್ಯವನ ನಿರ್ಮಿಸಲು ಜಿಲ್ಲಾಧಿಕಾರಿಗಳು ಅನುಮತಿ ನೀಡಿದ್ದಾರೆ. ಜೊತೆಗೆ ಚಿಕ್ಕಮಾದಿನಾಳದ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯದ 1 ಎಕರೆ ಜಾಗದಲ್ಲಿ ಸಸ್ಯವನ ನಿರ್ಮಾಣಕ್ಕೆ ಸಿದ್ಧತೆ ನಡೆದಿದೆ. ಇಂದ್ರಕೀಲ ಪರ್ವತದ ಕಲ್ಲಿನಲ್ಲಿ ಆಯುರ್ವೇದ ಸಸ್ಯ ಬೆಳೆಸಿ ಜಾಗತಿಕ ತಾಪಮಾನ ತಗ್ಗಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ವೇದಿಕೆ ಕಾರ್ಯಕ್ರಮವನ್ನು ಎನ್.ಐ.ಎಂ.ಎ ಅಧ್ಯಕ್ಷ ಡಾ. ಶಿವನಗೌಡ ಪಾಟೀಲ್ ಹಾಗೂ ಎ.ಎಫ್.ಐ ಅಧ್ಯಕ್ಷ ಡಾ. ವಿಶ್ವನಾಥ ನಾಲವಾಡ ಅವರು ಪಂಚವಟಿ ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ವಿಷಯ ತಜ್ಞರಿಂದ ಉಪನ್ಯಾಸ: ಕಾರ್ಯಕ್ರಮದ ಅಂಗವಾಗಿ ಗಂಗಾವತಿ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಗುರುರಾಜ ಎ. ಉಮಚಗಿ ಅವರು 'ಗಂಗಾವತಿ ಪಕ್ಷಾಘಾತ ಚಿಕಿತ್ಸಾ ಕೇಂದ್ರ'ದ ಕುರಿತು ಉಪನ್ಯಾಸ ನೀಡಿದರು.

ಎಸ್.ಎ. ನಿಂಗೋಜಿ ಆಯುರ್ವೇದ ಕಾಲೇಜಿನ ಅಧ್ಯಾಪಕ ಡಾ. ಮಂಜುನಾಥ ಸಜ್ಜನ್ ಅವರು 'ಜಾಗತಿಕ ಆಯುರ್ವೇದಕ್ಕಾಗಿ ಆಯುರ್ವೇದ ನಾವೀನ್ಯತೆ' ವಿಷಯದ ಕುರಿತು ಮಾತನಾಡಿದರು.

ಯಲಬುರ್ಗಾ ಆಸ್ಪತ್ರೆಯ ಡಾ. ಶಿಲ್ಪಾ ಬಾಚಲಾಪುರ ಅವರು ಪಂಚಕರ್ಮ ಮತ್ತು ಯೋಗದಿಂದ ಸಿಗುವ ದೈಹಿಕ ಹಾಗೂ ಮಾನಸಿಕ ನೆಮ್ಮದಿಯ ಮಹತ್ವವನ್ನು ವಿವರಿಸಿದರು.

ಗಂಗಾವತಿ ತಜ್ಞ ವೈದ್ಯೆ ಡಾ. ವೀಣಾ ಬಿಜ್ಜಳ ಮಾತನಾಡಿ, ಆಯುರ್ವೇದವು ಕೇವಲ ಚಿಕಿತ್ಸೆಯಲ್ಲ, ಅದು ದೈನಂದಿನ ಶಿಸ್ತುಬದ್ಧ ಜೀವನಶೈಲಿ ಎಂದು ಪ್ರತಿಪಾದಿಸಿದರು.

ಕಾರ್ಯಕ್ರಮದಲ್ಲಿ ಅಗಸ್ತ್ಯ ಆಯುರ್ವೇದ ಕಾಲೇಜಿನ ಪ್ರಾಧ್ಯಾಪಕ ಡಾ. ಪ್ರಭು ನಾಗಲಾಪುರ ಹಾಗೂ ಗೌರೀಪುರ ವೈದ್ಯಾಧಿಕಾರಿ ಡಾ. ಯಮನಪ್ಪ ಜೆ. ಶಿರವಾರ ಉಪಸ್ಥಿತರಿದ್ದರು.

ಆಯುಷ್ ವೈದ್ಯಾಧಿಕಾರಿಗಳ ತಂಡದವರು ಪ್ರಾರ್ಥನೆ ಗೀತೆಯನ್ನು ಹಾಡಿದರು. ಡಾ. ಗುರುರಾಜ ಉಮಚಗಿ ಕಾರ್ಯಕ್ರಮ ನಿರೂಪಿಸಿದರು, ಡಾ. ಮಾರುತಿ ದೊಡ್ಮನಿ ವಂದನಾರ್ಪಣೆ ಮಾಡಿದರು. ಜಿಲ್ಲೆಯ ಆಯುಷ್ ವೈದ್ಯರು ಹಾಗೂ ವಿದ್ಯಾರ್ಥಿಗಳು ಬಹುಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಜಾಗೃತಿ ಜಾಥಾ: ಕಾರ್ಯಕ್ರಮಕ್ಕೂ ಮುನ್ನ ಶ್ರೀ ಗವಿಮಠದ ಆವರಣದಿಂದ ಆಯೋಜಿಸಲಾಗಿದ್ದ ಜಾಗೃತಿ ಜಾಥ–ಕ್ಕೆ ಜಿಲ್ಲಾ ಆಯುಷ್ ಅಧಿಕಾರಿ ಡಾ. ಪರ್ವತ ಬ. ಹಿರೇಗೌಡರ ಅವರು ಡೊಳ್ಳು ಬಾರಿಸಿ, ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು. ಜಾಥಾವು ಗಂಜ್ ವೃತ್ತದ ಮಾರ್ಗವಾಗಿ ಜಿಲ್ಲಾಡಳಿತ ಭವನದ ವರೆಗೆ ಅದ್ದೂರಿಯಾಗಿ ನಡೆಯಿತು. ಈ ಜಾಥಾದಲ್ಲಿ 400ಕ್ಕೂ ಹೆಚ್ಚು ಆಯುಷ್ ವೈದ್ಯಾಧಿಕಾರಿಗಳು, ಸಿಬ್ಬಂದಿ ಹಾಗೂ ಆಯುರ್ವೇದ ವೈದ್ಯಕೀಯ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು.



SATY MITHI
Kannada Daily Morning



## ಮಂಜುನಾಥ ಕೋಟ್ನಿಕಲ್ ಅವರಿಗೆ ಸನ್ಮಾನ

ಗದಗ : ನಗರದಲ್ಲಿ ಹಿಂದೂ ಮಹಾ ಗಣಪತಿ ಹಾಗೂ ಸುದರ್ಶನ ಚಕ್ರ ಯುವಕ ಮಂಡಳ ವತಿಯಿಂದ ನಡೆದ ಧರ್ಮಸಭೆಯಲ್ಲಿ ಬಿಜೆಪಿ ಯುವ ನಾಯಕ ಮಂಜುನಾಥ ಕೋಟ್ನಿಕಲ್ ಅವರನ್ನು ಖ್ಯಾತ ವಾಗ್ಮೀ ಚಕ್ರವರ್ತಿ ಸೂಲಿಬೆಲೆ ಅವರು ಸನ್ಮಾನಿಸಿದರು. ನಗರಸಭೆ ಸದಸ್ಯರಾದ ವಿನಾಯಕ ಮಾನ್ವಿ ಸೇರಿದಂತೆ ಹಿಂದೂ ಮಹಾ ಗಣಪತಿ ಕಮಿಟಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಅನ್ನಭಾಗ್ಯ ಅಕ್ಕಿ ವಶ: ಚಾಲಕನ ಬಂಧನ

**ಬಾದಾಮಿ:** ಸರಕಾರದ ವಿವಿಧ ಯೋಜನೆಗಳಲ್ಲಿ ಉಚಿತವಾಗಿ ವಿತರಿಸುವ ಅಕ್ಕಿಯನ್ನು ಕಡಿಮೆ ಬೆಲೆಗೆ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಬೇಲೂರಿನಿಂದ ಬಾಗಲಕೋಟೆಗೆ ಒಯ್ಯುತ್ತಿದ್ದ ಲಾರಿ ಸಂಖ್ಯೆ ಕೆ.ಎ. 29/ಸಿ.7755 ಇದರಲ್ಲಿ ಇದ್ದ ಅಕ್ರಮ 571 ಅಕ್ಕಿ ಚೀಲಗಳನ್ನು 19975 ಕೆ.ಜಿಯ 4,59,425 ಮೌಲ್ಯದ ಅಕ್ಕಿ ಚೀಲಗಳನ್ನು ಆರೋಪಿಗಳಿಂದ ವಶಕ್ಕೆ ಪಡೆಯಲಾಗಿದೆ. ಚಾಲಕ ಅಬ್ದುಲ ಲತೀಪ್ ಆಗ್ರಾ ಇವನನ್ನು ಪೋಲಿಸರ ವಶಕ್ಕೆ ನೀಡಲಾಗಿದೆ, ಖಚಿತ ಮಾಹಿತಿ ಮೇರೆಗೆ ಆಹಾರ ಇಲಾಖೆಯ ನಿರೀಕಕ ಮಂಜುನಾಥ ರೊಟ್ಟಿ, ಇವರು ಅನಿರೀಕ್ಷಿತವಾಗಿ ದಾಳಿ ಮಾಡಿ ಸರಕಾರದ ಯಾವುದೇ ಅನುನತಿ ಇಲ್ಲದೇ ಮಾರಾಟ ಮಾಡಲು ಯತ್ನಿಸಿದ ಇಬ್ಬರಿಂದ ಅಕ್ಕಿ ವಶಕ್ಕೆ ಪಡೆದು ಇಬ್ಬರ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯನ್ನು ಪ್ರಕರಣ ದಾಖಲಿಸಲಾಗಿದೆ.ಈ ಸಂದರ್ಭದಲ್ಲಿ ಆಹಾರ ನಿರೀಕ್ಷಕ ಶಬ್ಬೀರ ಅಹಮ್ಮದ ಕೊತ್ವಾಲ ಪಂಚರಾದ ಮಾರುತಿ ದಾದಪ್ಪ ಸಾವಂತ, ಶಿವಬಸಪ್ಪ ನಾಗೇಂದ್ರಪ್ಪ ಅಂಗಡಿ ಇದ್ದರು






ಶ್ರೀ ಸುದರ್ಶನ ಚಕ್ರ ಯುವ ಮಂಡಳ 2026ನೇ ಸಾಲಿನ 5ನೇ ವರ್ಷ ಪ್ರತಿಷ್ಠಾಪನೆ ಮಾಡಿದ ಹಿಂದೂ ಮಹಾಗಣಪತಿ ಧರ್ಮಸಭೆಯಲ್ಲಿ ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲೆಬೆಲೆ ಅವರು ಆಗಮಿಸಿ ಸಭೆಯನ್ನುದ್ದೇಶಿಸಿ ಮಾತನಾಡಿದರು, ಇದೆ ಸಂದರ್ಭದಲ್ಲಿ ಕನಕದಾಸ ಶಿಕ್ಷಣ ಸಮಿತಿಯ ಚೇರ್ಮನ್ನ, ಭಾರತ ಸರಕಾರದ ಆಹಾರ ನಿಗಮದ ರಾಜ್ಯ ಸದಸ್ಯರಾದ ರವೀಂದ್ರನಾಥ ಬಿ ದಂಡಿನ, ಶ್ರೀಪತಿ ಉಡುಪಿ, ಸುಧೀರ್ ಕಾಟೇಗಾರ, ಮಾನವಿ, ಹಬೀಬ್, ರವಿ ಗುಂಜೀಕರ್, ಹೇಮಾದ್ರಿ ಅವರು ಹಾಗೂ ಇತರೆ ಪ್ರಮುಖ ಮುಖಂಡರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

## ಸೇವೆಯ ಮೂಲಕ ಸಮಾಜದ ನಾಡಿಮಿಡಿತ ಅರಿಯುವ ಅವಕಾಶ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :** ಪುಸ್ತಕದ ಪುಟಗಳಲ್ಲಿ ಕಲಿತ ಪಾಠಕ್ಕಿಂತ, ಸಮಾಜದ ನಡುವೆ ನಿಂತು ಬದುಕನ್ನು ಅರಿಯುವ ಅನುಭವವೇ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಗಟ್ಟಿಗೊಳಿಸುತ್ತದೆ. ಅಂತಹ ಅನುಭವ, ಮಾನವೀಯತೆ ಮತ್ತು ಸೇವಾ ಮನೋಭಾವವನ್ನು ಬೆಳೆಸುವ ಅತ್ಯುತ್ತಮ ವೇದಿಕೆಯೇ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಎಂದು ರಾಜ್ಯ ಎನ್‌ಎಸ್‌ಎಸ್ ಪ್ರಶಸ್ತಿ ಪುರಸ್ಕೃತ ಹಾಗೂ ಧಾರವಾಡದ ಸಸ್ಯಶಾಸ್ತ್ರ ಉಪನ್ಯಾಸಕ ಶಿವಯೋಗಿ ಹಾವೇರಿ ಹೇಳಿದರು.

ನರೇಗಲ್ಲ ಪಟ್ಟಣದ ಮರಿಯಪ್ಪ ಬಾಳಪ್ಪ ಕಳಕೊಣ್ಣವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎನ್‌ಎಸ್‌ಎಸ್‌ನಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದರಿಂದ ಯುವಜನರಲ್ಲಿ ರಾಷ್ಟ್ರೀಯತೆ, ಭಾವೈಕ್ಯತೆ, ಸಹಬಾಳ್ವೆ ಹಾಗೂ ನಾಯಕತ್ವದ ಗುಣಗಳು ಬೆಳೆಯುತ್ತವೆ. ಸೇವೆ ಮಾಡುವ ಕೈಗಳಿಗೆ ಸಮಾಜದ ನೋವು ಕಾಣುತ್ತದೆ; ಆ ನೋವನ್ನು ಅರ್ಥಮಾಡಿಕೊಂಡಾಗ ಮಾನವೀಯತೆ ಮೊಳೆಯುತ್ತದೆ. ಗ್ರಾಮೀಣ ಭಾಗದ ನೈಜ ಬದುಕು, ಜನರ ಸಮಸ್ಯೆಗಳು ಹಾಗೂ ಅವರ ಜೀವನಮಟ್ಟವನ್ನು ಹತ್ತಿರದಿಂದ ಅರಿಯುವ ಮೂಲಕ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ದೃಷ್ಟಿಕೋನದ ಜತೆಗೆ ಸಾಮಾಜಿಕ ಕಳಕಳಿಯೂ ಬೆಳೆಸಿಕೊಳ್ಳಬಹುದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ. ಕಸ್ತೂರೆವ್ವ ದಳವಾಯಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಹೊಣೆಗಾರಿಕೆಯನ್ನು ಜಾಗೃತಗೊಳಿಸುವುದೇ ನೈಜ ಶಿಕ್ಷಣದ ಪರಮ ಗುರಿಯಾಗಿದೆ. ವಿದ್ಯಾರ್ಥಿ ಜೀವನದಲ್ಲಿಯೇ ಶಿಸ್ತು, ಸಾಮಾಜಿಕ ಕಳಕಳಿ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕು. ಬದುಕಿನಲ್ಲಿ ದೊರೆಯುವ ಸುವರ್ಣಾವಕಾಶಗಳನ್ನು ಸದುಪಯೋಗಪಡಿಸಿಕೊಂಡು, ಇಂದಿನ ಸನ್ನಡತೆಯಿಂದ ನಾಳಿನ ಉಜ್ವಲ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿಕೊಳ್ಳಬೇಕು ಎಂದು ಹೇಳಿದರು.

ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಸುನಂದಾ ಮುಂಜಿ ಮಾತನಾಡಿ, ಗ್ರಾಮೀಣ ಶಿಬಿರಗಳಿಗೆ ತೆರಳಿದಾಗ ಹಳ್ಳಿಗಳ ವಾಸ್ತವ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕು. ಅನಕ್ಷರಸ್ಥರು ಹಾಗೂ ಹಿಂದುಳಿದ ವರ್ಗದ ಜನರಲ್ಲಿ ಅಕ್ಷರಜ್ಞಾನ, ಆರೋಗ್ಯ ಸಂರಕ್ಷಣೆ, ಸಂಸ್ಕಾರ ಮತ್ತು ಪರಿಸರ ನೈರ್ಮಲ್ಯದ ಕುರಿತು ಜಾಗೃತಿ ಮೂಡಿಸುವುದು ಎನ್‌ಎಸ್‌ಎಸ್‌ನ ಪ್ರಮುಖ ಆಶಯವಾಗಿದೆ. ಶಿಕ್ಷಣದಿಂದ ದೊರೆಯುವ ಆತ್ಮವಿಶ್ವಾಸವನ್ನು ಸಮಾಜದ ಒಳಿತಿಗಾಗಿ ಬಳಸಿಕೊಂಡು, ವಿದ್ಯಾರ್ಥಿಗಳು ಸಮಾಜಮುಖಿ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಎಸ್.ಎಸ್. ಸೂಡಿ, ಅನಿಲಕುಮಾರ, ಶಿವಪ್ಪ ಕುರಬರ, ವಿರೂಪಾಕ್ಷ ಆರ್., ವಿವೇಕಾನಂದ ಹಿರೇಮಠ ಸೇರಿದಂತೆ ಕಾಲೇಜಿನ ಬೋಧಕ–ಬೋಧಕೇತರ ಸಿಬ್ಬಂದಿ ಹಾಗೂ ಎನ್‌ಎಸ್‌ಎಸ್ ಸ್ವಯಂಸೇವಕರು ಉಪಸ್ಥಿತರಿದ್ದರು.



## ಕೊಪ್ಪಳ ಜಿಲ್ಲೆಯಲ್ಲಿ ಕೃಷಿ ಹೊಂಡಗಳ ನಿರ್ಮಾಣ ರೈತರಿಗೆ ವರದಾನ

**ಸತ್ಯಮಿಥ್ಯ ಸುದ್ದಿಮೂಲ ಕೊಪ್ಪಳ :** ಕಲ್ಯಾಣ ಕರ್ನಾಟಕದ ಕೊಪ್ಪಳ ಜಿಲ್ಲೆಯು ಬಹುತೇಕ ಮಳೆಯಾಧಾರಿತ ಕೃಷಿಯನ್ನು ಅವಲಂಬಿಸಿದೆ. ಸದ್ಯದ ಬರಗಾಲದ ಪರಿಸ್ಥಿತಿಯಲ್ಲಿ ಆಶಾಕಿರಣದಂತೆ ಬಂದ ಯೋಜನೆ ಎಂದರೆ ವಿಬಿ–ಜಿ ರಾಮ್–ಜಿ ಯೋಜನೆ. ಈ ಯೋಜನೆಯಡಿ ರೈತರು ಕೃಷಿಹೊಂಡ ನಿರ್ಮಿಸಿಕೊಂಡು ಮಳೆನೀರನ್ನು ಸಂಗ್ರಹಿಸುವುದರ ಮೂಲಕ ತಮ್ಮ ಕೃಷಿ ಭೂಮಿಗೆ ಕೃಷಿಹೊಂಡವನ್ನೇ ವರದಾನವನ್ನಾಗಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಇತ್ತೀಚೆಗೆ ಕುಕನೂರು ತಾಲ್ಲೂಕಿನಲ್ಲಿ ವಿಬಿ–ಜಿ ರಾಮ್–ಜಿ ಯೋಜನೆಯಡಿ ನಿರ್ಮಾಣವಾದ 8 ಕೃಷಿ ಹೊಂಡಗಳು. ಜಿಲ್ಲಾ ಪಂಚಾಯತಿಯ ಕ್ರಿಯಾ ಯೋಜನೆಯಲ್ಲಿ ಜಿಲ್ಲೆಯಾದ್ಯಂತ ಒಟ್ಟು 876 ಕೃಷಿ ಹೊಂಡಗಳಿಗೆ ಯೋಜನೆ ರೂಪಿಸಲಾಗಿದೆ. ಅವುಗಳಲ್ಲಿ ಜಿಲ್ಲೆಯ ಕುಕನೂರು ತಾಲ್ಲೂಕಿನ ಇಟಗಿಯಲ್ಲಿ 6, ಮಂಗಳೂರು ಹಾಗೂ ಬಳಗೇರಿಯಲ್ಲಿ ತಲಾ ಒಂದು ಕೃಷಿಹೊಂಡವನ್ನು ವಿಬಿ–ಜಿ ರಾಮ್–ಜಿ ಯೋಜನೆಯಡಿ ನಿರ್ಮಿಸಲಾಗಿದೆ. ಬಾಕಿ ಕೃಷಿ ಹೊಂಡಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿವೆ. ಜಿಲ್ಲೆಯ ಎಲ್ಲ ರೈತರೂ ವಿಬಿ–ಜಿ ರಾಮ್ ಜಿ ಯೋಜನೆಯಡಿ ತಮ್ಮ ಕೃಷಿಭೂಮಿಯಲ್ಲಿ ಕೃಷಿಹೊಂಡಗಳನ್ನು ನಿರ್ಮಿಸಿಕೊಳ್ಳಬಹುದಾಗಿದೆ.

ಹನಿ ಹನಿ ಸೇರಿದರೆ ಹಳ್ಳ ಎಂಬ ಮಾತಿನಂತೆ ಬರಗಾಲದ ಈ ಪರಿಸ್ಥಿತಿಯಲ್ಲಿ ಅಪರೂಪಕ್ಕೆ ಸುರಿಯುವ ಮಳೆ ನೀರನ್ನು ಸಂಗ್ರಹಿಸಿ, ಕೃಷಿಗೆ ಸದ್ಬಳಕೆ ಮಾಡಿಕೊಳ್ಳಬಹುದು. ಮಳೆಯ ಕೊರತೆ ನಡುವೆ ಕೃಷಿ ಹೊಂಡಗಳು ರೈತರಿಗೆ ನೆರವಾಗಬಲ್ಲವು. ಪ್ರತಿ ಕೃಷಿ ಹೊಂಡಕ್ಕೆ ಸರ್ಕಾರದಿಂದ ರೂ.1,23,000/– ಗಳ ಘಟಕ ವೆಚ್ಚವನ್ನು ಸಹ ನೀಡಲಾಗುತ್ತದೆ. ಇದರಲ್ಲಿ ರೂ.1,14,000/– ಗಳನ್ನು ಕೃಷಿ ಹೊಂಡ ನಿರ್ಮಿಸಲು ಹಾಗೂ ರೂ.8957/– ಗಳನ್ನು ಪೈಪ್‌ಲೈನ್ ಸಂಪರ್ಕಕ್ಕೆ ಬಳಸಿಕೊಳ್ಳಬಹುದು.

> ನೀರಿನ ಪ್ರತಿ ಹನಿಯೂ ಅತ್ಯಮೂಲ್ಯವಾಗಿದ್ದು, ವೈಜ್ಞಾನಿಕ ಉಪಕ್ರಮದ ಮೂಲಕ ದಿಬ್ಬದಿಂದ ಕಣಿವೆ ಮೂಲಕ ಕೃಷಿಹೊಂಡ ಅನುಷ್ಠಾನಗೊಳಿಸಿ ಮಳೆಗಾಲದಲ್ಲಿ ಓಡುವ ನೀರನ್ನು ನಿಲ್ಲಿಸಿ, ನಿಂತ ನೀರನ್ನು ಇಂಗಿಸಿ, ಅಂತರ್ಜಲ ಪ್ರಮಾಣ ವೃದ್ಧಿಸಿ, ನೀರಿನ ಸದ್ಬಳಕೆಯ ಮಹತ್ವವನ್ನು ಕೃಷಿಹೊಂಡ ನಿರ್ಮಾಣ ಕಾರ್ಯಕ್ರಮದ ಮೂಲಕ ಕಂಡುಕೊಳ್ಳಬ ಹುದಾಗಿದೆ.
>
> । ಡಾ.ಸುರೇಶ ಬಿ.ಇಟ್ನಾಳ, ಜಿಲ್ಲಾಧಿಕಾರಿಗಳು, ಕೊಪ್ಪಳ
>
> ವಿಬಿ–ಜಿ ರಾಮ್–ಜಿ ಯೋಜನೆಯಡಿ ಅನುಷ್ಠಾನಗೊಂಡ ಕೃಷಿ ಹೊಂಡ ನಿರ್ಮಾಣ ಕಾರ್ಯಕ್ರಮವು ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣಾ ಕಾಮಗಾರಿಯಾಗಿದ್ದು, ಇದು ರೈತರಿಗೆ ಅತ್ಯುಪಯುಕ್ತವಾಗಿದೆ. ಹೊಲದಲ್ಲಿ ಮಣ್ಣಿನ ಫಲವತ್ತತೆ, ತೇವಾಂಶ, ಮಣ್ಣಿನ ಸವಕಳಿ, ಅಂತರ್ಜಲ ಪ್ರಮಾಣ ವೃದ್ಧಿಗೊಂಡು ರೈತರು ಬರಗಾಲದಲ್ಲಿ, ಬೇಸಿಗೆಯಲ್ಲಿ ಹೆಚ್ಚಿನ ಫಸಲನ್ನು ಬೆಳೆದು, ಆರ್ಥಿಕವಾಗಿ ಸಬಲರಾಗುವಲ್ಲಿ ಸಹಕಾರಿಯಾಗಿದೆ.
>
> । ವರ್ಣಿತ್ ನೇಗಿ, ಸಿಇಒ ಜಿಲ್ಲಾ ಪಂಚಾಯತಿ



## ವಚನ ಲಹರಿಯಲ್ಲಿ ಅರ್ಥ ಪೂರ್ಣ ಸಂದೇಶ: ಮಾಜಿ ಸಚಿವ ಎಸ್.ಎಸ್. ಪಾಟೀಲ

**ಸತ್ಯಮಿಥ್ಯ ಸುದ್ದಿಮೂಲ ಗದಗ:** ಕಪ್ಪತ್ತಗಿರಿ ಫೌಂಡೇಶನ್ (ರಿ.), ಕಳಸಾಪೂರ–ಗದಗ, ಸಾಹಿತ್ಯ, ಶಿಕ್ಷಣ ಹಾಗೂ ಸಾಂಸ್ಕೃತಿಕ ಕಲಾ ವೇದಿಕೆಯ ವತಿಯಿಂದ ಸೆ. 20ರಂದು ಗದಗ ನಗರದ ವಿದ್ಯಾದಾನ ಶಿಕ್ಷಣ ಸಮಿತಿಯ ಶಾಲಾ ಸಭಾಂಗಣದಲ್ಲಿ ಅದ್ದೂರಿ ಶಿಕ್ಷಕರ ಸಮ್ಮೇಳನ, ರಾಜ್ಯಮಟ್ಟದ ವಿಚಾರ ಸಂಕಿರಣ, ಪ್ರಶಸ್ತಿ ಪ್ರದಾನ ಹಾಗೂ ವಿವಿಧ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ಜರುಗಿದವು.

ಸಮ್ಮೇಳನದಲ್ಲಿ ಕಪ್ಪತ್ತಗಿರಿ ಫೌಂಡೇಶನ್‌ನ ಸಂಸ್ಥಾಪಕ ಅಧ್ಯಕ್ಷೆ ಶ್ರೀಮತಿ ಚಂದ್ರಕಲಾ ಮ. ಇಟಗಿಮಠ ಅವರ ಸ್ವರಚಿತ 'ವಚನ ಲಹರಿ' ಆಧುನಿಕ ವಚನಗಳ ಗ್ರಂಥವನ್ನು ಮಾಜಿ ಶಾಸಕರಾದ ಎಸ್.ಎಸ್. ಪಾಟೀಲ ಅವರು ಬಿಡುಗಡೆಗೊಳಿಸಿದರು.

ಗ್ರಂಥ ಬಿಡುಗಡೆ ನಂತರ ಮಾತನಾಡಿದ ಎಸ್.ಎಸ್. ಪಾಟೀಲ ಅವರು, "ವಚನ ಲಹರಿಯಲ್ಲಿನ ವಚನಗಳು ಅರ್ಥಪೂರ್ಣ ಸಂದೇಶಗಳನ್ನು ಒಳಗೊಂಡಿವೆ. ಕಳಸಾಪೂರದಂತಹ ಗ್ರಾಮೀಣ ಪ್ರದೇಶದಲ್ಲಿ ಒಬ್ಬ ಮಹಿಳೆ ಸಂಸ್ಥೆಯೊಂದನ್ನು ಹುಟ್ಟುಹಾಕಿ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ಸಂಗತಿ" ಎಂದು ಹೇಳಿದರು. ಸಂಸ್ಥೆಯ ಕಾರ್ಯಗಳಿಗೆ ತಮ್ಮ ಸಹಾಯ–ಸಹಕಾರ ಸದಾ ಇರುತ್ತದೆ ಎಂದು ತಿಳಿಸಿದರು. ಮಹಿಳಾ ಸಂಘಟನೆಗಳ ಕಾರ್ಯಗಳಿಗೆ ಸಮಾಜದಿಂದ ಹೆಚ್ಚಿನ ಬೆಂಬಲ ದೊರೆಯಬೇಕು ಎಂದರು.

ಕಾರ್ಯಕ್ರಮವನ್ನು ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಸಚಿವರಾದ ಸೋಮಲಿಂಗ ಗೆಣ್ಣೂರು, ಕೆ.ಎ.ಎಸ್. ಅವರು ಉದ್ಘಾಟಿಸಿದರು. ಶಿಕ್ಷಕರ ಜವಾಬ್ದಾರಿ, ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ, ಅಧಿಕಾರಿಗಳ ದಕ್ಷತೆ ಹಾಗೂ ಮೂಢನಂಬಿಕೆಗಳ ನಿರ್ಮೂಲನೆ ಕುರಿತು ಅವರು ಮಾತನಾಡಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕ ಹಾಗೂ ಮಕ್ಕಳ ಸಾಹಿತಿ ಡಾ. ನಿಂಗು ಸೊಲಗಿ ಅವರು ವಹಿಸಿದ್ದರು. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ತಂತ್ರಜ್ಞಾನವನ್ನು ಸವಾಲಾಗಿ ಕಾಣದೆ, ಅದರಲ್ಲಿರುವ ಸಾಧ್ಯತೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಅಗತ್ಯವಿದೆ ಎಂದು ಅವರು ಹೇಳಿದರು.



ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಶಹಜಾನ ಮುದಕವಿ ಸಹಾಯಕ ಕುಲಸಚಿವರು ಜನಪದ ವಿಶ್ವವಿದ್ಯಾಲಯ ಗೊಟಗೋಡಿ ಅವರು, ಬೆಳಿಗ್ಗೆ 10ರಿಂದ ಸಂಜೆ 5.30 ರವರೆಗೆ ನಡೆದ ಸಮ್ಮೇಳನದ ಶಿಸ್ತುಬದ್ಧ ನಿರ್ವಹಣೆ, ಪ್ರಶಸ್ತಿ ಪ್ರದಾನ, ವಿಚಾರ ಸಂಕಿರಣದ ವಿವಿಧ ಗೋಷ್ಠಿಗಳು ಹಾಗೂ ಮಕ್ಕಳಿಗೆ ನೀಡಿದ ಗೌರವವನ್ನು ಶ್ಲಾಘಿಸಿದರು. ವೃತ್ತಿಯ ಜೊತೆಗೆ ಸಾಹಿತ್ಯ, ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಚಂದ್ರಕಲಾ ಇಟಗಿಮಠ ಅವರು ತೊಡಗಿಸಿಕೊಂಡಿರುವುದು ಅಭಿನಂದನಾರ್ಹ ಎಂದು ಹೇಳಿದರು.

**52 ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ**

ಸಮ್ಮೇಳನದಲ್ಲಿ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. 32 ಮಂದಿ ಜಿಲ್ಲಾ ಮಟ್ಟದ ಹಾಗೂ 22 ಮಂದಿ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕರು ಪ್ರಶಸ್ತಿ ಸ್ವೀಕರಿಸಿದರು. ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳನ್ನೂ ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಕಪ್ಪತ್ತಗಿರಿ ಫೌಂಡೇಶನ್‌ನ ಸಂಸ್ಥಾಪಕ ಅಧ್ಯಕ್ಷೆ ಶ್ರೀಮತಿ ಚಂದ್ರಕಲಾ ಮ. ಇಟಗಿಮಠ ಅವರು ಸಂಸ್ಥೆಯ ಉದ್ದೇಶ ಹಾಗೂ ಕಾರ್ಯಕ್ರಮದ ಔಚಿತ್ಯದ ಕುರಿತು ಮಾತನಾಡಿ, "ಒಂದು ಸಂಸ್ಥೆ ಬೆಳೆಯಬೇಕಾದರೆ ಹಲವಾರು ಕೈಗಳು ಒಂದಾಗಿ ಜೋಡಿಸಬೇಕು. ಸಂಸ್ಥೆಯ ಕಾರ್ಯಗಳಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಾಯ, ಸಹಕಾರ ನೀಡಿದ ಎಲ್ಲರಿಗೂ ಕೃತಜ್ಞತೆಗಳು" ಎಂದು ತಿಳಿಸಿದರು.

ತಮ್ಮ 'ವಚನ ಲಹರಿ' ಕೃತಿ ತಮ್ಮ ಕನಸಿನ ಮೊದಲ ಪುಸ್ತಕವಾಗಿದ್ದರೂ, ಐದನೇ ಪುಸ್ತಕವಾಗಿ ಹೊರಹೊಮ್ಮಿದೆ. ಆಧುನಿಕ ವಚನಗಳ ಈ ಕೃತಿ ಓದುಗರ ಮೆಚ್ಚುಗೆ ಗಳಿಸಲಿದೆ ಎಂಬ ವಿಶ್ವಾಸವಿದೆ ಎಂದು ಅವರು ಹೇಳಿದರು.

**ರಾಜ್ಯಮಟ್ಟದ ವಿಚಾರ ಸಂಕಿರಣ:** ಸಮ್ಮೇಳನದ ಅಂಗವಾಗಿ ರಾಜ್ಯಮಟ್ಟದ ವಿಚಾರ ಸಂಕಿರಣವೂ ನಡೆಯಿತು. ಡಾ. ಸರ್ವಪಲ್ಲಿ ರಾಧಾಕೃಷ್ಣ ವೇದಿಕೆ ಹಾಗೂ ಸಾವಿತ್ರಿಬಾಯಿ ಫುಲೆ ವೇದಿಕೆಗಳಲ್ಲಿ ತಲಾ ಎರಡು ಗೋಷ್ಠಿಗಳು ಜರುಗಿದವು.

ಸಮಾರೋಪದ ಪ್ರಾರ್ಥನೆಯನ್ನು ಶ್ರೀಮತಿ ವಿಜಯಲಕ್ಷ್ಮೀ ಉಪ್ಪಾರ ನೆರವೇರಿಸಿದರು. ಸ್ವಾಗತವನ್ನು ಶ್ರೀ ಪಕ್ಕೀರೇಶ ಚಕಾರದ ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಕು. ರಾಹುಲ್ ಗಿಡ್ನಂದಿ ಹಾಗೂ ಕು. ರಕ್ಷಿತ ಗಿಡ್ನಂದಿ ಅಚ್ಚುಕಟ್ಟಾಗಿ ನಿರ್ವಹಿಸಿದರು. ಕಾರ್ಯಕ್ರಮದ ಯಶಸ್ಸಿಗೆ ಶ್ರೀಮತಿ ಶಾಂತಾ ಅಂಗಡಿ, ಕಾವ್ಯ ಅಂಗಡಿ, ತೋಟಯ್ಯ ಗುಡ್ಡಿಮಠ, ಮಂಜುನಾಥ ಮುಧೋಳ, ಸುನೀಲ ಲಮಾಣಿ, ಸುಜ್ಞಾನಿ ಪಾಟೀಲ, ಶ್ರೀಮತಿ ಜುಬೇದಾ ನಾಯಕ ಸೇರಿದಂತೆ ಹಲವರು ಸಹಕರಿಸಿದರು.

ಗಣ್ಯರ ಉಪಸ್ಥಿತಿ, ಶಿಕ್ಷಕರ ಸನ್ಮಾನ, ವಿದ್ಯಾರ್ಥಿಗಳ ಗೌರವ, ಕಲೆ–ಸಾಹಿತ್ಯಕ್ಕೆ ಪ್ರೋತ್ಸಾಹ ಹಾಗೂ ರಾಜ್ಯಮಟ್ಟದ ವಿಚಾರ ಸಂಕಿರಣದೊಂದಿಗೆ ಸುಮಾರು ನಾಲ್ಕೈದು ನೂರು ಜನರ ಉಪಸ್ಥಿತಿಯಲ್ಲಿ ಸಮ್ಮೇಳನ ಯಶಸ್ವಿಯಾಗಿ ಸಂಪನ್ನವಾಯಿತು.

SATYAMITHI KANNADA DAILY MORNING OWNER, PUBLISHER, BY: CHANNAVEERAPPA NINGAPPA SAMAGANDI PUBLISHED FROM: KELAGAL{ETH, NEAR BASAVESHWAR DEVASTAN, HOME NO. 169, WARD NO, 4 MAIN ROAD GAJEDRAGAD, GADAG KARNATAKA - 582114 PRINTED AT: MAILARALINGESHWAR PRINTERS, WARD NO, 3, SUDI TQ, GAJENDRAGAD, GADAG, KARNATAKA- 582114